# <u>ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ</u>

ನಸದೊ/ಸಾ.ಸ./02/2008-09 ದಿನಾಂಕ:31-10-2008

## <u>-:: ಸಾಮಾನ್ಯ ಸಭೆ ::-</u>

ದಿನಾಂಕ:31-10-2008ರಂದು ಶುಕ್ರವಾರ 10.00ಗಂಟೆಗೆ ಸರಿಯಾಗಿ ನಗರಸಭೆಯ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ **ಶ್ರೀ ಜಿ. ರಾಮಕೃಷ್ಣರವರ** ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಯು ಸಮಯಾವಕಾಶದ ಅಭಾವದಿಂದ ದಿನಾಂಕ:03-11-2008 ರಂದು ಮುಂದುವರೆದು ನಡೆದ ಸಭೆಯಲ್ಲಿ ಮಾನ್ಯ ನಗರಸಭಾ ಉಪಾಧ್ಯಕ್ಷರು ಹಾಗೂ ನಗರಸಭಾ ಸದಸ್ಯರುಗಳ ಸಮ್ಮುಖದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಕೆಗಳು :-

**ದಿನಾಂಕ:31-10-2008ರಂದು ನಡೆದ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:**

| ಸದಸ್ಯರುಗಳು | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| | 30 | 01 | 31 |

ಪ್ರಥಮವಾಗಿ ಪೌರಾಯುಕ್ತರಾದ **ಶ್ರೀ ಎಸ್.ಜಿ.ರಾಜಶೇಖರ್,** ಕೆ.ಎಂ.ಎ.ಎಸ್.ರವರು ಸಭೆಯಲ್ಲಿ ಮಾತನಾಡಿ, ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ನಗರಸಭಾ ಮಾನ್ಯ ಅಧ್ಯಕ್ಷರಾದ **ಶ್ರೀ ಜಿ.ರಾಮಕೃಷ್ಣರವರಿಗೆ** ಮತ್ತು ನಗರಸಭಾ ಸದಸ್ಯರಿಗೆ ಹಾಗೂ ಪತ್ರಿಕಾ ಜಾಹಿರಾತುದಾರರಿಗೆ ಸ್ವಾಗತವನ್ನು ಕೋರಿ, ನಂತರ ಸಭೆಯನ್ನು ಪ್ರಾರಂಭಿಸಲು ಮಾನ್ಯ ಅಧ್ಯಕ್ಷರನ್ನು ಕೋರಿದರು.

**<u>ವಿಷಯ ಸಂಖ್ಯೆ: 1</u>**

ಸರ್ಕಾರದಿಂದ ಬಂದಿರುವ ಸುತ್ತೋಲೆಗಳನ್ನು ಓದಿ ದಾಖಲಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:1</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಸರ್ಕಾರದಿಂದ ಬಂದಿರುವ ಸುತ್ತೋಲೆ ಪತ್ರಗಳನ್ನು ಓದಿ ಅನುಮೋದಿಸಲಾಯಿತು.

**<u>ವಿಷಯ ಸಂಖ್ಯೆ: 2</u>**

ಹಿಂದಿನ ಸಭೆಗಳ ನಡವಳಿಕೆಗಳನ್ನು ಓದಿ ದಾಖಲಿಸುವ ವಿಚಾರ,

**<u>ತೀರ್ಮಾನ ಸಂಖ್ಯೆ:2</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ಹಿಂದಿನ ಸಭೆಗಳಲ್ಲಿ ದಾಖಲಿಸಲಾಗಿರುವ ವಿಷಯಗಳಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಮಾಡಲು ಸೂಚಿಸಿದರು.

ದಿನಾಂಕ:10-07-2008ರಂದು ನಡೆದ ವಿಷಯ ಸಂಖ್ಯೆ.6ರ ಬಗ್ಗೆ ಚರ್ಚಿಸಲಾಗಿ ನಗರಸಭೆ ವತಿಯಿಂದ ಹಳೇ ಬಸ್‌ನಿಲ್ದಾಣದ ಎದುರುಗಡೆ ಹೊಸದಾಗಿ ನಿರ್ಮಿತವಾಗಿರುವ ಮಳಿಗೆಗಳಿಗೆ ಮತ್ತು ಕೆಳಗಡೆ ಹಾಲಿ ಇರುವ ಅಂಗಡಿ ಮಳಿಗೆಗಳಿಗೂ ಕೂಡ ಹಿಂದೆ ವಿದ್ಯುತ್ ಕಾಮಗಾರಿ ನಿರ್ವಹಿಸಿರುವ ಗುತ್ತಿಗೆದಾರರಿಂದ ಸಂಪರ್ಕವನ್ನು ಕಲ್ಪಿಸಿ, ವಿದ್ಯುದ್ದೀಕರಣ ಕೆಲಸ ಪೂರ್ಣಮಾಡಲು ಸೂಚಿಸಲಾಯಿತು.

-2-

ದಿನಾಂಕ:10-07-2008ರಂದು ನಡೆದ ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳಲ್ಲಿ ವಿಷಯ ಸಂಖ್ಯೆ.8/3ರ ಬಗ್ಗೆ ಚರ್ಚಿಸಿ, ನಗರದಲ್ಲಿ ಸ್ವಚ್ಚತೆ ಕಾರ್ಯಕ್ಕೆ ಜೆ.ಸಿ.ಬಿ. ಬದಲಾಗಿ ಡೋಸರ್ ಮತ್ತು ಟ್ರ್ಯಾಕ್ಟರ್ ಖರೀದಿಸಲು ಮಾನ್ಯ ಜಿಲ್ಲಾಧಿಕಾರಿಗಳವರ ಕಛೇರಿಯಿಂದ ರೂ.13.00ಲಕ್ಷಗಳಿಗೆ ಅನುಮೋದನೆಗೊಂಡಿರುವಂತೆ ಡೋಸರ್ ಮತ್ತು ಟ್ರ್ಯಾಕ್ಟರ್‌ನ್ನು ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ದಿನಾಂಕ:10-07-2008ರಂದು ನಡೆದ ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳಲ್ಲಿ ವಿಷಯ ಸಂಖ್ಯೆ.8/7ರ ಬಗ್ಗೆ ಚರ್ಚಿಸಲಾಗಿ, ಅಧ್ಯಕ್ಷರು ಮತ್ತು ಉಪಾಧ್ಯಕ್ಷರವರಿವರಿಗೆ ಹಿಂದೆ ಇದ್ದ ಖುರ್ಚಿಗಳು ಹಳೆಯದಾಗಿದ್ದು, ದುರಸ್ಥಿಯಲ್ಲಿರುವುದರಿಂದ ಹಾಗೂ ಸದರಿ ಕೊಠಡಿಗಳಿಗೆ ಭೇಟಿ ನೀಡುವ ಚುನಾಯಿತ ಪ್ರತಿನಿಧಿಗಳು ಮತ್ತು ಸಾರ್ವಜನಿಕರು ಕುಳಿತುಕೊಳ್ಳಲು ಕುರ್ಚಿಗಳು ಕಡಿಮೆ ಇರುವ ಕಾರಣ ಅಧ್ಯಕ್ಷರು, ಉಪಾಧ್ಯಕ್ಷರವರಿಗೆ ರಿವಾಲ್ವಿಂಗ್ ಛೇರ್‌ಗಳು-2 ಮತ್ತು ಉತ್ತಮ ಗುಣಮಟ್ಟವುಳ್ಳ 30-ಪ್ಲಾಸ್ಟಿಕ್ ಛೇರ್‌ಗಳನ್ನು ತರಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ, ಮಾನ್ಯ ಸದಸ್ಯರಿಗೂ ಸಹ 30-ಕುಷನ್ ಛೇರ್‌ಗಳನ್ನು ತರಿಸಲು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಯಿತು.

ದಿನಾಂಕ:01-09-2008ರಂದು ನಡೆದ ವಿಶೇಷ ಸಭೆಯ ವಿಷಯ ಸಂಖ್ಯೆ.1ರಲ್ಲಿ ತೀರ್ಮಾನಿಸಿರುವುದನ್ನು ತಿದ್ದುಪಡಿ ಮಾಡಲು ಚರ್ಚಿಸಲಾಗಿ, ಕೆಲಸ ನಿರ್ವಹಿಸಿದ ಬಿಲ್ಲು ಅನ್ನುವ ಬದಲಾಗಿ ಕಾಮಗಾರಿ ನಿರ್ವಹಿಸಿದ ಕಡತಕ್ಕೆ ಮಾತ್ರ ಸಹಿಯನ್ನು ಮಾಡಲು ಅಧ್ಯಕ್ಷರವರಿಗೆ ಕ್ರಮವಹಿಸುವಂತೆ ಚರ್ಚಿಸಿ ತೀರ್ಮಾನಿಸಲಾಯಿತು. ಹಾಗೂ ಅದ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳಲ್ಲಿ ವಿಷಯ ಸಂಖ್ಯೆ.4/1ರ ತೀರ್ಮಾನದಂತೆ ಮಾಡಿರುವ ರಸ್ತೆ ಮತ್ತು ವೃತ್ತಗಳ ಅಭಿವೃದ್ಧಿ ಕ್ರಿಯಾ ಯೋಜನೆಯ ಮೊತ್ತ ರೂ.396.00ಲಕ್ಷಗಳು ಎಂಬುದಾಗಿ ದಾಖಲಾಗಿದ್ದು, ವಾಸ್ತವಿಕವಾಗಿ 378.40ಲಕ್ಷಗಳಾಗಿದ್ದು, ಉಳಿಕೆ 17.60ಲಕ್ಷಗಳನ್ನು ಕೈಬಿಟ್ಟಿದ್ದು, ಇದನ್ನು ವಿರೋಧಿಸಿ ಕಿರಿಯ ಅಭಿಯಂತರರನ್ನು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರ ಮೇಲೆ ಕ್ರಮ ಜರುಗಿಸಲು ತೀರ್ಮಾನಿಸಿದ್ದು, ಕೈಬಿಟ್ಟಿರುವ 17.60ಲಕ್ಷಗಳು ಹೊಸ ದರಪಟ್ಟಿಯ ರೀತ್ಯಾ ಕ್ರಿಯಾ ಯೋಜನೆ ತಯಾರಿಸದೇ ಇರುವುದರಿಂದ ಈ ಮೊತ್ತವು ಕ್ರಿಯಾ ಯೋಜನೆಯಲ್ಲಿ ಸೇರಿಲ್ಲವೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾನ್ಯ ನಗರಸಭಾ ಸದಸ್ಯರಿಗೆ ತಿಳಿಸಿದ್ದು, ಕೈ ಬಿಟ್ಟಿರುವ ಮೊತ್ತದ ಕ್ರಿಯಾ ಯೋಜನೆಯನ್ನು ಹೊಸದಾಗಿ ಸೇರಿಸಿಕೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:3**

ಮಾರ್ಚ್-2008 ರಿಂದ ಆಗಸ್ಟ್-2008ರ ವರೆಗಿನ ಮಾಹೆಗಳ ಜನನ-ಮರಣಗಳ ವಿವರಗಳನ್ನು ಓದಿ ದಾಖಲಿಸುವ ವಿಚಾರ.

**ತೀರ್ಮಾನ ಸಂಖ್ಯೆ:3**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಮಾರ್ಚ್-2008 ರಿಂದ ಆಗಸ್ಟ್-2008ರ ವರೆಗಿನ ಜನನ-ಮರಣ ದಾಖಲಾತಿಗಳನ್ನು ಈ ಕೆಳಕಂಡಂತೆ ಒಪ್ಪಿ ದಾಖಲಿಸಲಾಯಿತು.

| ಕ್ರ. ಸಂ | ಮಾಹೆವಾರು | ಜನನ | | | ಮರಣ | | |
|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಮಾರ್ಚ್-2008 | 105 | 99 | 204 | 43 | 26 | 69 |
| 2 | ಏಪ್ರಿಲ್-2008 | 142 | 167 | 309 | 33 | 15 | 48 |
| 3 | ಮೇ-2008 | 85 | 132 | 217 | 19 | 19 | 38 |
| 4 | ಜೂನ್-2008 | 132 | 174 | 306 | 44 | 15 | 59 |
| 5 | ಜುಲೈ-2008 | 141 | 157 | 293 | 39 | 30 | 69 |
| 6 | ಆಗಸ್ಟ್-2008 | 123 | 152 | 275 | 45 | 18 | 63 |

ದಿನಾಂಕ:31-10-2008ರಂದು ನಡೆದ ಸಾಮಾನ್ಯ ಸಭೆಯು ಸಮಯಾಭಾವದಿಂದ ದಿನಾಂಕ: 03-11-2008ರಂದು ಮುಂದುವರೆದು ನಡೆದ ಸಭೆಯ ನಡವಳಿಕೆಗಳು ಹಾಗೂ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:

| | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| ಸದಸ್ಯರುಗಳು | 25 | 06 | 31 |

**ವಿಷಯ ಸಂಖ್ಯೆ:4**

ಮಾರ್ಚ್-2008 ರಿಂದ ಆಗಸ್ಟ್-2008ರ ವರೆಗಿನ ಮಾಹೆಗಳ ಜಮಾ-ಖರ್ಚುಗಳನ್ನು ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:4**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಮಾರ್ಚ್-2008 ರಿಂದ ಆಗಸ್ಟ್-2008ರ ವರೆಗಿನ ಜಮಾ-ಖರ್ಚುಗಳನ್ನು ಅನುಮೋದಿಸಲಾಯಿತು.

**ವಿಷಯ ಸಂಖ್ಯೆ:5**

ನಗರಸಭೆಯ ನೈರ್ಮಲ್ಯ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಾಹನ ಸಂಖ್ಯೆ KA-04/7347ರ ಟ್ರ್ಯಾಕ್ಟರ್‌ನ ಶಾಫ್ಟ್‌ಕಟ್ಟಾಗಿ ನಿಂತು ಹೋಗಿರುವ ಕಾರಣ ದುರಸ್ಥಿ ಮಾಡಲು ಅಂದಾಜು ಮೊತ್ತ ರೂ.70,000/-ಗಳು ತಗಲುಬಹುದಾಗಿದ್ದು, ದುರಸ್ಥಿ ಗೊಳಿಸಲು ಅನುಮೋದಿಸುವ ಬಗ್ಗೆ ಹಾಗೂ ದುರಸ್ಥಿ ಕಾಲಾವಧಿವರೆಗೆ ಬಾಡಿಗೆಗೆ ಟ್ರ್ಯಾಕ್ಟರ್‌ನ್ನು ಪಡೆದು ದಿನವೊಂದಕ್ಕೆ ರೂ.800/-ಗಳ ಬಾಡಿಗೆಗೆ ಸಭೆಯ ನಿರೀಕ್ಷಣೆಯ ಮೇರೆಗೆ ಪಡೆದಿದ್ದು, ನಗರಸಭಾ ನಿಧಿಯಿಂದ ಬಾಡಿಗೆಯನ್ನು ಪಾವತಿಸುವ ವಿಚಾರ.

-4-

**ತೀರ್ಮಾನ ಸಂಖ್ಯೆ:5**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರಸಭೆಯ ನೈರ್ಮಲ್ಯ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಾಹನ ಸಂಖ್ಯೆ KA-04/7347ರ ಟ್ರ್ಯಾಕ್ಟರ್‌ನ ಶಾಫ್ಟ್‌ಕಟ್ಟಾಗಿ ನಿಂತು ಹೋಗಿರುವ ಕಾರಣ ದುರಸ್ಥಿ ಮಾಡಲು ಅಂದಾಜು ಮೊತ್ತ ರೂ.70,000/-ಗಳ ಅಂದಾಜು ಪಟ್ಟಿಯನ್ನು ಮಹೇಂದ್ರ ಶೋ ರೂಂ ದೊಡ್ಡಬಳ್ಳಾಪುರ ರವರು ನೀಡಿರುವುದನ್ನು ಚರ್ಚಿಸಿ, ಸದರಿ ಅಂದಾಜು ಮೊತ್ತ ತುಂಬಾ ದುಭಾರಿಯಾಗಿದ್ದು, ಬೇರೆ ಮೆಕ್ಯಾನಿಕ್‌ರವರಿಂದ ವಾಹನ ದರಸ್ಥಿಗೆ ಆಗುವ ಅಂದಾಜನ್ನು ವಿಚಾರಿಸಿ, ಇದಕ್ಕಿಂತ ಕಡಿಮೆ ದರದದಲ್ಲಿ ಟ್ರ್ಯಾಕ್ಟರ್ ರಿಪೇರಿ ಮಾಡಿಸಲು ಹಾಗೂ ಸದರಿ ವಾಹನವು ಕೆಟ್ಟಿರುವುದರಿಂದ ನಗರದ ಮಧ್ಯಭಾಗದಲ್ಲಿ ಮಾರುಕಟ್ಟೆ ಪ್ರದೇಶವಿದ್ದು, ಪ್ರತಿದಿನ ಕಸವನ್ನು ಸಾಗಿಸಬೇಕಾಗಿರುವುದರಿಂದ ವಾಹನವು ದುರಸ್ಥಿ ಯಾಗುವವರೆಗೂ ನಗರದ ನೈರ್ಮಲ್ಯ ವಿಭಾಗದಲ್ಲಿ ಸ್ವಚ್ಛತೆಯನ್ನು ಕಾಪಾಡುವ ಸಲುವಾಗಿ ಟ್ರ್ಯಾಕ್ಟರ್ ಇಂಜಿನನ್ನು ಮಾತ್ರ ಹಾಗೂ ಇಂಧನವನ್ನು ಸೇರಿಸಿ ಬಾಡಿಗೆಗೆ ಪಡೆದು, ಕಛೇರಿಯ ಚಾಲಕರನ್ನು ಹಾಗೂ ನೈರ್ಮಲ್ಯ ವಿಭಾಗದ ನೌಕರರಿಂದ ಕೆಲಸ ನಿರ್ವಹಿಸಲು ತೀರ್ಮಾನಿಸಲಾಯಿತು. ಹಾಗೂ ದಿನಾಂಕ:13-09-2008 ರಿಂದ ನಗರದಲ್ಲಿ ಸ್ವಚ್ಛತೆ ಕೆಲಸಕ್ಕಾಗಿ ಟ್ರ್ಯಾಕ್ಟರ್ ಬಾಡಿಗೆಗೆ ಸಭೆಯ ಮಂಜೂರಾತಿ ನಿರಾಕ್ಷೇಣೆ ಮೇರೆಗೆ ಪಡೆದಿರುವುದನ್ನು ಸಭೆಯಲ್ಲಿ ಅನುಮೋದಿಸಿ ಟ್ರ್ಯಾಕ್ಟರ್ ಇಂಜಿನ್‌ಗೆ ದಿನವೊಂದಕ್ಕೆ ರೂ.700/-(ಏಳುನೂರು ರೂಪಾಯಿಗಳು ಮಾತ್ರ)ಗಳಂತೆ ಬಾಡಿಗೆಯನ್ನು ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಹಾಗೂ ಕಛೇರಿಯ ಆವರಣದಲ್ಲಿ ಸುಮಾರು ವರ್ಷಗಳಿಂದ ರಿಪೇರಿ ಮಾಡಿಸಲು ಆಗದೇ ಕೆಟ್ಟು ಹೋಗಿ ನಿಂತಿರುವ ಹಳೇ ಟ್ರ್ಯಾಕ್ಟರ್ ಇಂಜಿನ್‌ನ್ನು ಮತ್ತು ಕಛೇರಿಯ ನೀರು ಸರಬರಾಜು ವಿಭಾಗ, ನೈರ್ಮಲ್ಯ ವಿಭಾಗದಲ್ಲಿರುವ ಇನ್ನಿತರೆ ಅನುಪಯುಕ್ತ ವಸ್ತುಗಳನ್ನು ಹರಾಜು ಹಾಕಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:6**

ಟ್ರ್ಯಾಕ್ಟರ್ ಸಂಖ್ಯೆ. KA-04/1905ರ ರೇಡಿಯೇಟರ್‌ನಲ್ಲಿ ಆಯಿಲ್ ಸೋರುತ್ತಿದ್ದು ಮತ್ತು ಸೈಲೆನ್ಸರ್‌ನಿಂದ ಆಯಿಲ್ ಉಗುಳುತ್ತಿದ್ದು, ಇಂಜಿನ್ ದುರಸ್ಥಿಗೊಳಿಸಬೇಕಾಗಿದ್ದು, ಅದೇ ರೀತಿ ಟ್ರ್ಯಾಕ್ಟರ್‌ನ್ ದೊಡ್ಡ ಮತ್ತು ಚಿಕ್ಕ ಟೈರ್‌ಗಳನ್ನು ಸಹ ಬದಲಾಯಿಸುವ ವಿಚಾರ.

**ತೀರ್ಮಾನ ಸಂಖ್ಯೆ:6**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಟ್ರ್ಯಾಕ್ಟರ್‌ನ ದುರಸ್ಥಿಗೆ ಟೈರ್‌ಗಳನ್ನು ಬದಲಾಯಿಸಲು ಕೊಟೇಶನ್ ಕರೆದು ದರಪಟ್ಟಿಯನ್ನು ತರಿಸಿ, ಕಡಿಮೆ ದರಪಟ್ಟಿಯನ್ನು ನಮೂದಿಸಿರುವ ಕಂಪನಿಗಳಿಂದ ದುರಸ್ಥಿಗೊಳಿಸಲು ಹಾಗೂ ಟೈರ್‌ಗಳನ್ನು ಖರೀದಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:7**

ಗಣೇಶನ ವಿಸರ್ಜನೆಗಾಗಿ ತಾತ್ಕಾಲಿಕ ಗುಂಡಿಗಳನ್ನು ಹಾಗೂ ತ್ಯಾಜ್ಯ ವಸ್ತುಗಳನ್ನು ಶುದ್ಧೀಕರಣ ಘಟಕ್ಕೆ ಸಾಗಿಸಲು ಮತ್ತು ಪರಿಸರ ಮಾಲೀನ್ಯ ರಕ್ಷಣೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಂಡಿರುವ ಕಾರ್ಯವನ್ನು ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:7**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಪ್ರತಿ ವರ್ಷವೂ ಗಣೇಶನ ವಿಸರ್ಜನೆಗಾಗಿ ತಾತ್ಕಾಲಿಕ ಗುಂಡಿಗಳನ್ನು ನಿರ್ಮಿಸುವ ಬದಲಾಗಿ ಶಾಶ್ವತವಾಗಿರುವಂತೆ ಪರಿಹಾರವನ್ನು ಕೈಗೊಳ್ಳುವಂತೆ ಹಾಗೂ ಗಣೇಶನ ವಿಸರ್ಜನೆಗೆ ಮತ್ತು ತ್ಯಾಜ್ಯ ವಸ್ತುಗಳನ್ನು ಶುದ್ಧೀಕರಣಘಟಕ್ಕೆ ಸಾಗಿಸಲು ಮತ್ತು ಪರಿಸರ ಮಾಲೀನ್ಯ ರಕ್ಷಣೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಂಡಿರುವುದನ್ನು ಸಭೆಯಲ್ಲಿ ಅನುಮೋದಿಸಿ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:8**

ನಗರದ 5-ವಾರ್ಡ್‌ಗಳಲ್ಲಿ ಹಾಗೂ ಮಾರುಕಟ್ಟೆಯ ತ್ಯಾಜ್ಯಗಳನ್ನು ಸಂಗ್ರಹಿಸಿ ಎರೆಹುಳು ಗೊಬ್ಬರ ತಯಾರಿಸಲು ಸ್ತ್ರೀ ಶಕ್ತಿ ಸಂಘಗಳು ಇಚ್ಚಿಸಿದ್ದು, ಸದರಿಯವರಿಗೆ ಘನ ತ್ಯಾಜ್ಯ ವಸ್ತು ವಿಲೇವಾರಿ ಸ್ಥಳದಲ್ಲಿ ಸ್ಥಳಾವಕಾಶ ನೀಡಲು ಹಾಗೂ ತೊಟ್ಟಿಗಳನ್ನು ನಿರ್ಮಿಸಲು ಬೇಕಾಗುವ ಸಾಮಗ್ರಿಗಳನ್ನು ಒದಗಿಸಿಕೊಡುವ ವಿಚಾರ.

**ತೀರ್ಮಾನ ಸಂಖ್ಯೆ:8**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ಯೋಜನೆಯಿಂದ ನಗರಸಭೆಗೆ ಬರುವ ಆದಾಯ ಹಾಗೂ ಈ ಯೋಜನೆಗೆ ಬೇಕಾಗಿರುವ ಸಾಧನ ಸಲಕರಣೆಗಳ ದರಪಟ್ಟಿಯನ್ನು ಮತ್ತು ಪೂರಕ ಮಾಹಿತಿಯೊಂದಿಗೆ ಸಭೆಯಲ್ಲಿ ಮಂಡಿಸದೇ ಇರುವುದರಿಂದ ಸ್ಪಷ್ಟ ಮಾಹಿತಿಯೊಂದಿಗೆ ಈ ವಿಷಯವನ್ನು ಮುಂದಿನ ಸಭೆಗೆ ಮಂಡಿಸಲು ಸೂಚಿಸಲಾಯಿತು.

**ವಿಷಯ ಸಂಖ್ಯೆ:9**

ವಾರ್ಡ್ ನಂ.4, 8, 9, 10, 12, 13, 18 ಮತ್ತು 19ರ ಚರಂಡಿಗಳಲ್ಲಿ ಹೂಳು ಹೆಚ್ಚಾಗಿ ತುಂಬಿದ್ದು, ತುಂಡು ಗುತ್ತಿಗೆ ಆಧಾರದ ಮೇಲೆ ಹೂಳೆತ್ತುವ ಕಾರ್ಯಕ್ಕೆ ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:9**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ತುಂಡುಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ನೀಡಿದಲ್ಲಿ ಗುತ್ತಿಗೆದಾರರು ಸರಿಯಾಗಿ ಕಾರ್ಯ ನಿರ್ವಹಿಸದೇ ಇರುವ ಬಗ್ಗೆ ಕೂಲಂಕುಂಶವಾಗಿ ಸಭೆಯಲ್ಲಿ ಚರ್ಚಿಸಲಾಗಿ ತಾತ್ಕಾಲಿಕವಾಗಿ 20ಜನ ನೌಕರರನ್ನು ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಂಡು ನಗರದ ಎಲ್ಲಾ ದೊಡ್ಡ ಚರಂಡಿಗಳನ್ನು ಸ್ವಚ್ಚತೆ ಮಾಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:10**

ನಗರಸಭೆಯಲ್ಲಿ ನಡೆಯುವ ಸಭೆಗಳಿಗೆ ಉಪಹಾರ ವ್ಯವಸ್ಥೆ ಮಾಡಲು ತಟ್ಟೆ ಲೋಟ ಹಾಗೂ ಇತರೆ ಸಾಮಗ್ರಿಗಳನ್ನು ಖರೀದಿಸಿರುವ ಬಾಬ್ತು ರೂ.15,000/-ಗಳನ್ನು ಪಾವತಿಸುವ ವಿಚಾರ.

**ತೀರ್ಮಾನ ಸಂಖ್ಯೆ:10**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರಸಭೆಯಲ್ಲಿ ನಡೆಯುವ ಸಭೆಗಳಿಗೆ ಉಪಹಾರ ವ್ಯವಸ್ಥೆಗೆ ತಟ್ಟೆಲೋಟ ಹಾಗೂ ಇತರೆ ಸಾಮಗ್ರಿಗಳನ್ನು ಖರೀದಿಸಿರುವ ಬಾಬ್ತು ರೂ.15,000/-(ಹದಿನೈದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:11**

ಘನತ್ಯಾಜ್ಯ ವಸ್ತು ನಿರ್ವಹಣೆ ಬಗ್ಗೆ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸಲು ವರ್ಣ ಚಿತ್ರ, ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಿದ್ದು, ಈ ಕಾರ್ಯಕ್ರಮಕ್ಕೆ ಖರ್ಚಾದ ಹಣವನ್ನು ಪಾವತಿಸುವ ವಿಚಾರ.

**ತೀರ್ಮಾನ ಸಂಖ್ಯೆ:11**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಘನತ್ಯಾಜ್ಯ ವಸ್ತು ನಿರ್ವಹಣೆ ಬಗ್ಗೆ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸಲು ವರ್ಣ ಚಿತ್ರ, ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಿರುವ ಬಾಬ್ತು ಖರ್ಚಾದ ಹಣ ರೂ.20,000/-ಗಳನ್ನು (ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ಪಾವತಿಸಿಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:12**

ನಗರಸಭಾ ವ್ಯಾಪ್ತಿಯಲ್ಲಿ ದ್ವಿತೀಯ ಹಂತದ ಕಸಸಂಗ್ರಹಣೆಯ ಕಾರ್ಯವನ್ನು ಗುತ್ತಿಗೆಗೆ ನೀಡುವ ವಿಚಾರ.

**ತೀರ್ಮಾನ ಸಂಖ್ಯೆ:12**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಕ್ರಿಯಾ ಯೋಜನೆಯನ್ನು ತಯಾರಿಸಿ, ಮಾನ್ಯ ಜಿಲ್ಲಾಧಿಕಾರಿಗಳವರ ಅನುಮೋದನೆ ಪಡೆದು ಕ್ರಮ ಕೈಗೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:13**

ಪ್ರಾಥಮಿಕ ಕಸ ಸಂಗ್ರಹಣೆಯ ಸ್ತ್ರೀ ಶಕ್ತಿ ಸಂಘದವರಿಗೆ ಸರ್ಕಾರದ ಸುತ್ತೋಲೆಯಂತೆ ನಗರಸಭಾ ವತಿಯಿಂದ 6 ತಿಂಗಳ ಮಟ್ಟಿಗೆ ಪ್ರೋತ್ಸಾಹ ಧನವಾಗಿ ಶೇ.30ರಷ್ಟು ಹಣ ಪಾವತಿಸುವ ವಿಚಾರ.

**ತೀರ್ಮಾನ ಸಂಖ್ಯೆ:13**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಈ ವಿಷಯವನ್ನು ಮುಂಬರುವ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು

**ವಿಷಯ ಸಂಖ್ಯೆ:14**

ಟ್ರ್ಯಾಕ್ಟರ್ ಸಂಖ್ಯೆ.KA-04/3433ರ ಹೈಡ್ರಾಲಿಕ್ ದುರಸ್ಥಿಗೊಳಿಸುವ ವಿಚಾರ.

**ತೀರ್ಮಾನ ಸಂಖ್ಯೆ:14**

ಸದರಿ ವಿಷಯನ್ನು ಸಭೆಯಲ್ಲಿ ಚರ್ಚಿಸಲಾಗಿ ಟ್ರ್ಯಾಕ್ಟರ್ ಸಂ. KA-04/3433ರ ಹೈಡ್ರಾಲಿಕ್ ದುರಸ್ಥಿಯಾಗಿದ್ದು, ಈ ವಾಹವನ್ನು ದುರಸ್ಥಿ ಪಡಿಸಲು ಸಂಬಂಧಿಸಿದ ಕಂಪನಿಯವರಿಂದ ಅಂದಾಜು ಪಟ್ಟಿಯನ್ನು ತರಿಸಿ, ಕ್ರಮಕೈಗೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:15**

ಟ್ರ್ಯಾಕ್ಟರ್ ಸಂಖ್ಯೆ.KA-04/8030ರ ಇಂಜಿನ್‌ನ ದೊಡ್ಡ ಟೈರ್‌ಗಳನ್ನು ಬದಲಾಯಿಸುವ ವಿಚಾರ.

**ತೀರ್ಮಾನ ಸಂಖ್ಯೆ:15**

ಸದರಿ ವಿಷಯನ್ನು ಸಭೆಯಲ್ಲಿ ಚರ್ಚಿಸಲಾಗಿ ಟ್ರ್ಯಾಕ್ಟರ್ ಸಂ. KA-04/8030ರ ಇಂಜಿನ್‌ನ ಕಟ್ಟುಹೋಗಿದ್ದು, ಈ ವಾಹವನ್ನು ದುರಸ್ಥಿ ಪಡಿಸಲು ಸಂಬಂಧಿಸಿದ ಕಂಪನಿಯವರಿಂದ ಅಂದಾಜು ಪಟ್ಟಿಯನ್ನು ತರಿಸಿ, ಕ್ರಮಕೈಗೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:16**

ಮಾಹಿತಿ ಶಿಕ್ಷಣ ಸಂಪರ್ಕ ಕಾರ್ಯಕ್ರಮಕ್ಕೆ ಟೆಲಿವಿಷನ್ ಮತ್ತು ಡಿ.ವಿ.ಡಿ. ಖರೀದಿಸುವ ವಿಚಾರ.

**ತೀರ್ಮಾನ ಸಂಖ್ಯೆ:16**

ಸದರಿ ವಿಷಯನ್ನು ಸಭೆಯಲ್ಲಿ ಚರ್ಚಿಸಲಾಗಿ ಅಂದಾಜು ಪಟ್ಟಿಯನ್ನು ತರಿಸಿ, ಕ್ರಮಕೈಗೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:17</u>**

ನಾಯಿ ಕಡಿತಕ್ಕೆ ಆಂಟಿ ರೇಬಿಸ್ ಔಷಧಿ ಖರೀದಿಸಲು 2008-09ನೇ ಸಾಲಿನ ಆಯ-ವ್ಯಯದಲ್ಲಿ ರೂ.5000/-ಗಳನ್ನು ಮಾತ್ರ ನಿಗಧಿಪಡಿಸಿದ್ದು, ಈ ಮೊತ್ತವನ್ನು ಹೆಚ್ಚಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:17</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, 2008-09ನೇ ಸಾಲಿನ ಆಯ-ವ್ಯಯದಲ್ಲಿ ಆಂಟಿ ರೇಬೀಸ್ ಔಷಧಿ ಖರೀದಿಗೆ ನಿಗಧಿಪಡಿಸಿರುವ ರೂ.5000/-ಗಳ ಬದಲಾಗಿ 1.00ಲಕ್ಷ ರೂ.ಗಳನ್ನು ಕಾಯ್ದಿರಿಸಲು ತಿದ್ದುಪಡಿ ಮಾಡಲು ತೀರ್ಮಾನಿಸಲಾಯಿತು. ಹಾಗೂ ಹುಚ್ಚುನಾಯಿ ಕಡಿತಕ್ಕೆ ಒಳಗಾಗುವ ಸಾರ್ವಜನಿಕರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳು ವಿತರಿಸಿರುವ ನಾಯಿಕಡಿತದ ಪ್ರಮಾಣ ಪತ್ರದ ಜೊತೆಯಲ್ಲಿ ಆಯಾ ವಾರ್ಡಿನ ಸದಸ್ಯರ ಒಪ್ಪಿಗೆ ಪತ್ರವನ್ನು ಈ ಕಛೇರಿಗೆ ಹಾಜರುಪಡಿಸಿದಲ್ಲಿ ಒಬ್ಬರಿಗೆ ರೂ.400/-(ನಾಲ್ಕು ನೂರು ರೂಪಾಯಿಗಳು ಮಾತ್ರ) ಗಳನ್ನು ಕಛೇರಿ ವತಿಯಿಂದ ಪಾವತಿಸಲು ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:18</u>**

ನಗರ ವ್ಯಾಪ್ತಿಯಲ್ಲಿ ನಾಯಿಗಳು ಹೆಚ್ಚಾಗಿದ್ದು, ಹುಚ್ಚುನಾಯಿಗಳ ಕಡಿತದಿಂದ ಸಾರ್ವಜನಿಕರಿಗೆ ತೊಂದರೆಯಾಗಿದ್ದು, ನಾಯಿ ಕಡಿತ ಪ್ರಕರಣಗಳು ಹೆಚ್ಚಾಗಿರುವುದರಿಂದ ನಾಯಿಗಳನ್ನು ನಿಯಂತ್ರಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:18</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರ ವ್ಯಾಪ್ತಿಯಲ್ಲಿ ಬರುವ ಹುಚ್ಚುನಾಯಿಗಳನ್ನು ನಿಯಂತ್ರಿಸಲು ತುರ್ತಾಗಿ ಅಗತ್ಯ ಕ್ರಮವನ್ನು ಕೈಗೊಳ್ಳಲು ಆರೋಗ್ಯ ನಿರೀಕ್ಷಕರಿಗೆ ಸೂಚಿಸಿ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:19</u>**

ನಗರ ವ್ಯಾಪ್ತಿಯಲ್ಲಿ ಹಂದಿಗಳು ಹೆಚ್ಚಾಗಿದ್ದು, ಪರಿಸರ ಮಾಲೀನ್ಯ ಉಂಟು ಮಾಡುತ್ತಾ ಎಲ್ಲೆಂದರಲ್ಲಿ ಓಡಾಡುವುದರಿಂದ ರೋಗಗಳು ಹರಡುವ ಸಾಧ್ಯತೆಗಳಿರುವುದರಿಂದ ಹಂದಿಗಳನ್ನು ನಿಯಂತ್ರಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:19</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರ ವ್ಯಾಪ್ತಿಯಲ್ಲಿ ಬರುವ ಹಂದಿಗಳನ್ನು ನಿಯಂತ್ರಿಸಲು ತುರ್ತಾಗಿ ಅಗತ್ಯ ಕ್ರಮವನ್ನು ಕೈಗೊಳ್ಳಲು ಆರೋಗ್ಯ ನಿರೀಕ್ಷಕರಿಗೆ ಸೂಚಿಸಿ ಹಾಗೂ ಹಂದಿ ಮಾಲೀಕರಿಗೆ ದಂಡದ ರೂಪದಲ್ಲಿ ಶುಲ್ಕ ವಸೂಲಾತಿಯನ್ನು ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:20</u>**

ತಾಂತ್ರಿಕ ಶಾಖೆಯ ಕಾಮಗಾರಿ ಕಡತಗಳ ನಿರ್ವಹಣೆಗಾಗಿ 4 ಅಲ್ಮೇರಗಳನ್ನು ಖರೀದಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:20</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಕಂದಾಯ ಶಾಖೆಗೆ ಸಂಬಂಧಿಸಿದ ಅಸೆಸ್‌ಮೆಂಟ್ ವಹಿಗಳನ್ನು ಎಲ್ಲೆಂದರಲ್ಲಿ ಬೇನಾಮಿಯಾಗಿ ಬಿಸಾಡುವ ಬದಲು ಭದ್ರವಾಗಿ ಶೇಖರಿಸಲು ಅವಶ್ಯಕತೆಗನುಣವಾಗಿ ಅಲ್ಮೇರಗಳನ್ನು ತರಿಸಿ ಕಂದಾಯ ಶಾಖೆಗೆ-4ನಂ. ತಾಂತ್ರಿಕ ಶಾಖೆಗೆ-2ನಂ. ಹಾಗೂ ಇತರೆ ಶಾಖೆಗಳಿಗೆ ಅವಶ್ಯಕತೆಗನುಗುಣವಾಗಿ ವಿತರಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:21**

ತಾಲ್ಲೂಕು ಶಿವರಾಜ್ ಕುಮಾರ್ ಕನ್ನಡ ಸೇನಾ ಸಮಿತಿಯಿಂದ ಡಾ:ರಾಜ್ ಕುಮಾರ್‌ರವರ ಪುತ್ಥಳಿಯನ್ನು ಅನಾವರಣಗೊಳಿಸಲು ಸರ್ಕಾರಿ ಆಸ್ಪತ್ರೆ ಮುಂಭಾಗ ಅಥವಾ ಟಿ.ಸಿದ್ದಲಿಂಗಯ್ಯ ವೃತ್ತದ ಬಳಿ ಸ್ಥಳಾವಕಾಶ ಕೋರಿರುವ ವಿಚಾರ.

**ತೀರ್ಮಾನ ಸಂಖ್ಯೆ:21**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಮೇಲ್ಕಂಡ ಸಂಸ್ಥೆಯವರಿಗೆ ಸರ್ಕಾರಿ ಆಸ್ಪತ್ರೆಯ ಹತ್ತಿರ ಸರ್ಕಲ್ ಪಂಪ್‌ಹೌಸ್‌ನ ನೀರಿನ ಕಾಂರಜಿ ಮಧ್ಯಭಾಗದಲ್ಲಿ ಡಾ:ರಾಜ್ ಕುಮಾರ್‌ರವರ ಪುತ್ಥಳಿಯನ್ನು ಅನಾವರಣಗೊಳಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಹಾಗೂ ಅದೇ ರೀತಿ ಉಳಿಕೆ ಸಂಘ ಸಂಸ್ಥೆಗಳವರು ರಾಷ್ಟ್ರಕವಿಗಳ, ಸಾಹಿತಿಗಳ ಹಾಗೂ ಇತರೆ ಗಣ್ಯ ವ್ಯಕ್ತಿಗಳ ಪುತ್ಥಳಿಗಳನ್ನು ಸ್ಥಾಪಿಸಲು ಸ್ಥಳ ಕೋರಿದರೆ, ಈ ಬಗ್ಗೆ ಪರಿಶೀಲನೆ ಮಾಡಿ ಸದರಿ ಸಂಘ ಸಂಸ್ಥೆಗಳವರಿಗೆ ನಗರದ ಸೂಕ್ತ ಜಾಗದಲ್ಲಿ ಸ್ಥಳಾವಕಾಶ ಕಲ್ಪಿಸಲು ಸಹ ಸಭೆಯಲ್ಲಿ ಸರ್ವಾನುಮತ ದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:22**

ನಗರಸಭಾ ವ್ಯಾಪ್ತಿಯಲ್ಲಿ ಕೆಲವು ರಸ್ತೆಗಳಿಗೆ ಡಾಂಬರು ಹಾಗೂ ಕಾಂಕ್ರೀಟ್ ರಸ್ತೆಗಳ ಕಾರ್ಯ ಕೈಗೆತ್ತಿಕೊಂಡಿದ್ದು, ಅವಶ್ಯವಿರುವ ರಸ್ತೆಗಳಿಗೆ ಪೈಪ್‌ಲೈನ್ ಅಳವಡಿಸುವ ವಿಚಾರ.

**ತೀರ್ಮಾನ ಸಂಖ್ಯೆ:22**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ 2008-09ನೇ ಸಾಲಿನಲ್ಲಿ ನಡೆಯುತ್ತಿರುವ ಕಾಮಗಾರಿಗಳಲ್ಲಿ ಅಗತ್ಯವಿರುವ ಈ ಕೆಳಕಂಡ ರಸ್ತೆಗಳಲ್ಲಿ ಪೈಪ್‌ಲೈನ್ ಅಳವಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

1) ವಾರ್ಡ್ ನಂ.11ರ ಶ್ರೀ ಕೊಂಗಾಡಿಯಪ್ಪ ಹೈಸ್ಕೂಲ್ ಪಕ್ಕದ ರಸ್ತೆಯಲ್ಲಿ 4ಇಂಚು ಪೈಪ್‌ಲೈನ್ ಹಾಕುವ ಕೆಲಸ,
2) ವಾರ್ಡ್ ನಂ.11ರ ಸರಸ್ವತಿ ಶಾಲೆಯ ಮುಂಭಾಗದ ರಸ್ತೆಯಲ್ಲಿ 3ಇಂಚು ಪೈಪ್‌ಲೈನ್ ಹಾಕುವ ಕೆಲಸ,
3) ವಾರ್ಡ್ ನಂ.3ರ ಮುತ್ಸಂದ್ರದ ಶೆಟ್ಟರ ತೋಟದ ಕೊಳವೆ ಬಾವಿಯಿಂದ ಮೇಲ್ಭಾಗದ ಕ್ರಾಸ್ ವರೆಗೆ 3ಇಂಚು ಪೈಪ್‌ಲೈನ್ ಹಾಕುವ ಕೆಲಸ,
4) ವಾರ್ಡ್ ನಂ.31ರ ಶಾಂತಿನಗರದ 1ನೇ ಕ್ರಾಸ್ ಮತ್ತು 5ನೇ ಕ್ರಾಸ್‌ಗೆ ಪೈಪ್‌ಲೈನ್ ಹಾಕುವ ಕೆಲಸ.
5) ವಾರ್ಡ್ ನಂ.29ರ ಬುರುಗುಬುಟ್ಟಿ ಮೆನಯ ಮುಂಭಾಗದ ರಸ್ತೆಯಲ್ಲಿ 2ಇಂಚು ಪೈಪ್‌ಲೈನ್ ಹಾಕುವ ಕೆಲಸ.
6) ವಾರ್ಡ್ ನಂ.6ರ ಹಳೆ ಸಾರಾಯಿ ಅಂಗಡಿ ಪಕ್ಕದ ರಸ್ತೆಯಲ್ಲಿ 2½ಇಂಚು ಪೈಪ್‌ಲೈನ್ ಹಾಕುವ ಕೆಲಸ.
7) ವಾರ್ಡ್ ನಂ.12ರ ಪದ್ಮಶಾಲಿ ಛತ್ರದ ಹಿಂಭಾಗದ ರಸ್ತೆಯಲ್ಲಿ 2ಇಂಚು ಪೈಪ್‌ಲೈನ್ ಹಾಕುವ ಕೆಲಸ,
8) ವಾರ್ಡ್ ನಂ.21ರ ಹೇಮಾವತಿಪೇಟೆ ಮಾರ್ಕೆಟ್ ಟ್ಯಾಂಕ್‌ನಿಂದ ಶ್ರೀ ಎಂ.ಡಿ.ಜಯಶಂಕರ್ ರವರ ಮನೆಯವರೆಗೆ 4ಇಂಚು ಪೈಪ್‌ಲೈನ್ ಹಾಕುವ ಕೆಲಸ.
9) ವಾರ್ಡ್ ನಂ.19ರ ಬಸವಣ್ಣದೇವಸ್ಥಾನದ ಎದುರು ಸ್ತೆಯಲ್ಲಿ 3ಇಂಚು ಪೈಪ್‌ಲೈನ್ ಹಾಕುವ ಕೆಲಸ.
10) ವಾರ್ಡ್ ನಂ.30ರ ಇಸ್ಲಾಂಪುರ 7ನೇ ಕ್ರಾಸ್‌ನಲ್ಲಿ 2 ಇಂಚು ಪೈಪ್ ಲೈನ್ ಹಾಕುವ ಕೆಲಸ.

**<u>ವಿಷಯ ಸಂಖ್ಯೆ:23</u>**

ಸನ್ಮಾನ್ಯ ಮುಖ್ಯಮಂತ್ರಿಗಳು ನಗರಕ್ಕೆ ಭೇಟಿ ನೀಡಿರುವ ಸಂದರ್ಭದಲ್ಲಿ ಟಿ.ಸಿದ್ದಲಿಂಗಯ್ಯ ಸರ್ಕಲ್ ಬಳಿ ಇರುವ ಸರ್ಕಲ್ ಪಂಪ್‌ಹೌಸ್ ಹಾಗೂ ಮುಂಭಾಗದ ನೀರಿನ ಕಾರಂಜಿ ರಿಪೇರಿ ಕೆಲಸ ಮಾಡಿಸಿದ್ದು, ಸದರಿ ವೆಚ್ಚವನ್ನು ಅನುಮೋದಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:23</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ದೊಡ್ಡಬಳ್ಳಾಪುರ ನಗರಕ್ಕೆ ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪರವರು ಭೇಟಿ ನೀಡಿರುವ ಹಿನ್ನೆಲೆಯಲ್ಲಿ ನಗರದ ಟಿ.ಸಿದ್ದಲಿಂಗಯ್ಯ ಸರ್ಕಲ್ ಬಳಿ ಇರುವ ಸರ್ಕಲ್ ಪಂಪ್‌ಹೌಸ್ ಹಾಗೂ ಮುಂಭಾಗದ ನೀರಿನ ಕಾರಂಜಿ ರಿಪೇರಿಯನ್ನು ಗುತ್ತಿಗೆದಾರರಿಂದ ಮಾಡಿಸಿರುವ ಬಾಬ್ತು,ರೂ 40,000/- ಹಣವನ್ನು ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:24</u>**

ನಗರಸಭೆಯ ಆಡಳಿತ ಶಾಖೆ ಕಟ್ಟಡ ಮತ್ತು ನಾಗರೀಕರ ಸೇವಾ ಕೇಂದ್ರ ಕಡ್ಡಗಳಿಗೆ ವಿದ್ಯುತ್ ಕಡಿತಗೊಂಡಾಗ ಪರ್ಯಾಯ ವ್ಯವಸ್ಥೆಗೆ 2 ಕೆ.ವಿ.ಎ. ಸಾಮರ್ಥ್ಯದ ಯು.ಪಿ.ಎಸ್. ಅಳವಡಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:24</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಅಂದಾಜು ಪಟ್ಟಿಯನ್ನು ತರಿಸಿ ಮುಂದಿನ ಸಭೆಗೆ ವಿಷಯನ್ನು ಮಂಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:25</u>**

ಕೆ.ಎಂ.ಆರ್.ಪಿ. ಯೋಜನಾ ಸಿಬ್ಬಂದಿಗೆ ಹಾಗೂ ನಗರಸಭಾ ಸಿಬ್ಬಂದಿಗೆ ಸ್ಥಳಾವಕಾಶ ಕಲ್ಪಿಸಲು ನಾಗರೀಕರ ಸೇವಾ ಕೇಂದ್ರ ಕಟ್ಟಡದ ಮೇಲ್ಭಾಗದಲ್ಲಿ 1ನೇ ಮಹಡಿ ನಿರ್ಮಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:25</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಅಂದಾಜು ಪಟ್ಟಿಯನ್ನು ತಯಾರಿಸಿ ಮುಂದಿನ ಸಭೆಗೆ ವಿಷಯನ್ನು ಮಂಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:26</u>**

ನಗರದ ವಿವಿಧ ವಾರ್ಡ್‌ಗಳಲ್ಲಿ ಅಗತ್ಯ ಕಾಮಗಾರಿಗಳನ್ನು ತೆಗೆದುಕೊಳ್ಳಲು ಆಡಳಿತಾತ್ಮಕ ಮಂಜೂರಾತಿ ನೀಡುವ ವಿಚಾರ.

**<u>ತೀರ್ಮಾನ ಸಂಖ್ಯೆ:26</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ಕೆಳಕಂಡ ಕಾಮಗಾರಿಗಳನ್ನು ಅತೀ ತುರ್ತಾಗಿ ಕ್ರಮ ಕೈಗೊಂಡು ನಿರ್ವಹಿಸಲು ಸಭೆಯಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು.

| ಕ್ರ. ಸಂ. | ಕಾಮಗಾರಿ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | ಅರಳುಮಲ್ಲಿಗೆ ಶಾಲೆ ಹಿಂಭಾಗದ ದೊಡ್ಡಚರಂಡಿ ಅಗಲ ಮಾಡುವುದು. | 1.00 |
| 2 | ದತ್ತಾತ್ರೇಯ ಛತ್ರದ ಮುಂಭಾಗದಲ್ಲಿರುವ ಕಲ್ಲುಕಟ್ಟಡದ ಚರಂಡಿಯನ್ನು ಅಗಲ ಮಾಡುವುದು | 0.75 |
| 3 | ಕರೇನಹಳ್ಳಿ ಪಂಜಿನಿ ಗುರು ಮನೆಯಿಂದ ಇಂದ್ರರವರ ಮನೆಯವರೆಗೆ ಚರಂಡಿ ಮಾಡುವುದು. | 1.50 |
| 4 | ಗಂಗಾಧಪುರ ಡಾ: ರವಿ ಮನೆಯ ಹತ್ತಿರದಿಂದ ಕಾಲೋನಿ ರಾಜ್ ಕಾಲುವೆ ವರೆಗೆ ಚರಂಡಿ ರೀ ಸೆಟ್ ಮಾಡುವುದು. | 0.40 |

| 1 | 2 | 3 |
|---|---|---|
| 5 | ಭುವನೇಶ್ವರಿನಗರ ರಾಮಣ್ಣನವರ ಮನೆಯಿಂದ ಲೋಕೇಶ್ ಮನೆವರೆಗೆ, ಯಲ್ಲಮ್ಮನವರ ಮನೆಯಿಂದ ಮೇಸ್ತ್ರಿ ವಾಸು ರವರ ಮನೆವರೆಗೆ, ಪಗಡಾಲ ರಾಮಚಂದ್ರಪ್ಪರವರ ಮನೆಯಿಂದ ದೊಡ್ಡ ಮೋರಿಯವರೆಗೆ ಚದರ ಬಿಲ್ಲೆ ಹಾಸುವುದು, | 0.20 |
| 4 | ಸಂಜಯನಗರ ಗಾರೆ ಕೃಷ್ಣಪ್ಪನವರ ಮನೆ ಪಕ್ಕದ ಗಲ್ಲಿ ಹಾಗೂ ದಾಳಪ್ಪನವರ ಮನೆ ಮುಂಭಾಗದ ರಸ್ತೆಗೆ ಚದರ ಬಿಲ್ಲೆ ಹಾಸುವುದು. | 0.20 |
| 5 | ಗಾಂಧಿನಗರದ ರಾಧಮ್ಮನವರ ಮನೆಯಿಂದ ಕಾಡನೂರು ಸರಸ್ವತಮ್ಮನವರ ಮನೆಯವರೆಗೆ ಕಾಂಕ್ರೀಟ್ ರಸ್ತೆ ಮಾಡುವುದು. | 0.50 |

**<u>ವಿಷಯ ಸಂಖ್ಯೆ:27</u>**

ಶೇ.18ರ ನಿಧಿಯಡಿ ಮತ್ತು ನಗರಸಭಾ ನಿಧಿಯಡಿಯಲ್ಲಿ ವಿವಿಧ ಕಾಮಗಾರಿಗಳಿಗೆ ಟೆಂಡರ್ ಕರೆದಿದ್ದು, ಗುತ್ತಿಗೆದಾರರು ಸಲ್ಲಿಸಿರುವ ಟೆಂಡರ್ ದರಗಳನ್ನು ಅಂಗೀಕರಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:27</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಶೇ.18ರ ನಿಧಿಯಡಿಯಲ್ಲಿ ಟೆಂಡರ್ ಪ್ರಕಟಣೆ ಸಂಖ್ಯೆ.ನಸದೊ/ತಾಂತ್ರಿಕ ವಿಭಾಗ/ಟಿ.ಎನ್/04/2007–08 ದಿನಾಂಕ:13–02–2008ರ ಟೆಂಡರ್ ಪ್ರಕ್ರಿಯೆಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅನುಮೋದಿಸುವ ದರಗಳಂತೆ ಒಪ್ಪಿ ಸಭೆಯಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು.

| ಕ್ರ. ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಗಳಲ್ಲಿ) | ಅನುಮೋದಿಸಿದ ದರಗಳು ಹಾಗೂ ಗುತ್ತಿಗೆದಾರರ ಹೆಸರು |
|---|---|---|---|
| 1 | ವಾರ್ಡ್ ನಂ.9ರ ಸಂಜಯನಗರದಲ್ಲಿ ಬರುವ ಅಡ್ಡರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮಾಡುವ ಕೆಲಸ. | 80000 | ಕೆ.ಎಂ.ಅಶ್ವಥ್‌ನಾರಾಯಣ ದೊಡ್ಡಬಳ್ಳಾಪುರ ಶೇ.10.30 ಕಡಿಮೆ |
| 2 | ವಾರ್ಡ್‌ನಂ.10ರ ವೀರಭದ್ರನಪಾಳ್ಯ ಪಿಂಜಾರು ಬೀಡು ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮಾಡುವ ಕೆಲಸ. | 80000 | ಕೆ.ಎಂ.ಅಶ್ವಥ್‌ನಾರಾಯಣ ದೊಡ್ಡಬಳ್ಳಾಪುರ ಶೇ.10.30 ಕಡಿಮೆ |
| 3 | ವಾರ್ಡ್ ನಂ.6 ಮುತ್ತೂರು ಕಾಲೋನಿಯಲ್ಲಿ ರುವ ಅಡ್ಡ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮಾಡುವ ಕೆಲಸ. | 65000 | ಕೆ.ಎಂ.ಅಶ್ವಥ್‌ನಾರಾಯಣ ದೊಡ್ಡಬಳ್ಳಾಪುರ ಶೇ.10.30 ಕಡಿಮೆ |
| 4 | ವಾರ್ಡ್ ನಂ.7ರ ದರ್ಗಾಪುರದಲ್ಲಿ ಬರುವ ಅಡ್ಡರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮಾಡುವ ಕೆಲಸ. | 80000 | ಕೆ.ಎಂ.ಅಶ್ವಥ್‌ನಾರಾಯಣ ದೊಡ್ಡಬಳ್ಳಾಪುರ ಶೇ.10.30 ಕಡಿಮೆ |
| 5 | ವಾರ್ಡ್‌ನಂ.4ರ ವಿನಾಯಕನಗರ ಕಾಲೋನಿ ಯಲ್ಲಿ ಚರಂಡಿ ನಿರ್ಮಾಣ ಕಾಮಗಾರಿ. | 60000 | ಕೆ.ಎಂ.ಅಶ್ವಥ್‌ನಾರಾಯಣ, ದೊಡ್ಡಬಳ್ಳಾಪುರ ಶೇ.8.00ಹೆಚ್ಚಿಗೆ. (ಸಿಂಗಲ್ ಟೆಂಡರ್ ಆಗಿರುತ್ತದೆ) |
| 6 | ವಾರ್ಡ್ ನಂ.28ರ ಪೊಲೀಸ್ ಕ್ವಾರ್ಟರ್ಸ್ ಹಿಂಭಾಗದ ಲ್ಲಿನ ಕಾಲೋನಿಯಲ್ಲಿ ಚರಂಡಿ ನಿರ್ಮಾಣ ಕಾಮಗಾರಿ. | 50000 | ಕೆ.ಎಂ.ಅಶ್ವಥ್‌ನಾರಾಯಣ, ದೊಡ್ಡಬಳ್ಳಾಪುರ ಶೇ.8.00ಹೆಚ್ಚಿಗೆ. (ಸಿಂಗಲ್ ಟೆಂಡರ್ ಆಗಿರುತ್ತದೆ) |

-11-

| 1 | 2 | 3 | 4 |
|---|---|---|---|
| 7 | ವಾರ್ಡ್ ನಂ.29ರ ಕಛೇರಿ ಪಾಳ್ಯದಲ್ಲಿ ಚರಂಡಿ ನಿರ್ಮಾಣ ಕಾಮಗಾರಿ. | 60000 | ಕೆ.ಎಂ.ಅಶ್ವಥ್‌ನಾರಾಯಣ, ದೊಡ್ಡಬಳ್ಳಾಪುರ ಶೇ.8.00ಹೆಚ್ಚಿಗೆ. (ಸಿಂಗಲ್ ಟೆಂಡರ್ ಆಗಿರುತ್ತದೆ) |
| 8 | ವಾರ್ಡ್ ನಂ.31ರ ಕಛೇರಿಪಾಳ್ಯದಲ್ಲಿ ಚರಂಡಿ ನಿರ್ಮಾಣ ಕಾಮಗಾರಿ | 50000 | ಕೆ.ಎಂ.ಅಶ್ವಥ್‌ನಾರಾಯಣ, ದೊಡ್ಡಬಳ್ಳಾಪುರ ಶೇ.8.00ಹೆಚ್ಚಿಗೆ. (ಸಿಂಗಲ್ ಟೆಂಡರ್ ಆಗಿರುತ್ತದೆ) |

**<u>ವಿಷಯ ಸಂಖ್ಯೆ:28</u>**

ನಗರಸಭಾ ವ್ಯಾಪ್ತಿಯಲ್ಲಿ 2007–08ನೇ ಸಾಲಿನ ಎಸ್.ಎಫ್.ಸಿ. ಅನುದಾನದಡಿಯಲ್ಲಿ ಅಳವಡಿಸಿರುವ 154ಸಂಖ್ಯೆ ಮೆಟಲ್ ಹೈಲೈಡ್ ದೀಪಗಳ ಹಾಗೂ ಶೇ.18ರ ನಿಧಿಯಡಿ ಅಳವಡಿಸಿರುವ 64ಸಂಖ್ಯೆ ಮೆಟಲ್ ಹೈಲೈಡ್ ದೀಪಗಳ ಒಂದು ವರ್ಷದ ನಿರ್ವಹಣಾ ಕಾಲಾವಧಿ ಮುಗಿದಿದ್ದು, ಈ ದೀಪಗಳ ರಿಪೇರಿ ಮತ್ತು ನಿರ್ವಹಣೆಯನ್ನು ಟೆಂಡರ್ ಅನುಮೋದಿತ ದರಗಳ ರೀತ್ಯಾ ಹಾಲಿ ಗುತ್ತಿಗೆ ನಿರ್ವಹಿಸುತ್ತಿರುವ ಎ.ಜಿ. ಪವರ್ ಸಿಸ್ಟಂ, ಬೆಂಗಳೂರು ರವರಿಗೆ ವಹಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:28</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ 2008–09ನೇ ಸಾಲಿನ ಎಸ್.ಎಫ್.ಸಿ. ಅನುದಾನದಡಿಯಲ್ಲಿ ಅಳವಡಿಸಿರುವ 154ಸಂಖ್ಯೆಯ ಮೆಟಲ್ ಹೈಲೈಡ್ ದೀಪಗಳ ಹಾಗೂ ಶೇ.18ರ ನಿಧಿಯಡಿ ಅಳವಡಿಸಿರುವ 64ಸಂಖ್ಯೆಯ ಮೆಟಲ್ ಹೈಲೈಡ್ ದೀಪಗಳ ನಿರ್ವಹಣಾ ಕಾಲಾವಧಿ ಟೆಂಡರ್ ಷರತ್ತಿನಂತೆ ಆಗಸ್ಟ್ ತಿಂಗಳಿಗೆ ಮುಗಿದಿದ್ದು, ಮೇಲ್ಕಂಡ ವಿದ್ಯುತ್ ದೀಪಗಳ ಮುಂದಿನ ನಿರ್ವಹಣೆಗಾಗಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಎ.ಜಿ.ಪವರ್ ಸಿಸ್ಟಂ ಬೆಂಗಳೂರು ರವರು ಈ ಬೀದಿದೀಪಗಳನ್ನು ಆಗಸ್ಟ್ ತಿಂಗಳಿಂದಲೇ ನಿರ್ವಹಿಸುತ್ತಿದ್ದು, ಟೆಂಡರ್ ಅನುಮೋದಿತ ದರಗಳ ರೀತ್ಯಾ ರಿಪೇರಿ ಮತ್ತು ನಿರ್ವಹಣೆಯನ್ನು ಸದರಿಯವರಿಗೆ ವಹಿಸಲು ಸಭೆಯಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:29</u>**

ನಗರಸಭಾ ವ್ಯಾಪ್ತಿಯ 31 ವಾರ್ಡ್‌ಗಳಲ್ಲಿ ಟ್ಯೂಬ್‌ಲೈಟ್ ವಿದ್ಯುತ್ ದೀಪಗಳನ್ನು ಅಳವಡಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:29</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಪ್ರತಿ ವಾರ್ಡಿಗೆ 5 ಟ್ಯೂಬ್‌ಲೈಟ್‌ಗಳಂತೆ ವಿತರಿಸಲು ಸಭೆಯಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು. ಹಾಗೂ ನಗರ ವ್ಯಾಪ್ತಿಯಲ್ಲಿ ಬರುವ ಹೊರವಲಯದ ವಾರ್ಡ್‌ಗಳಿಗೆ ಹೆಚ್ಚುವರಿಯಾಗಿ 5 ಟ್ಯೂಬ್ ಲೈಟ್‌ಗಳನ್ನು ನೀಡಲು 200ನಂ. ಟ್ಯೂಬ್‌ಲೈಟ್‌ಗಳನ್ನು ಖರೀದಿಸಲು ಸಭೆಯಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:30</u>**

ಬಸವಣ್ಣ ದೇವಸ್ಥಾನದ ಎದುರುಗಡೆ ರಸ್ತೆ, ನೆಲಮಂಗಲ ರಸ್ತೆಯಿಂದ 11ನೇ ಕ್ರಾಸ್‌ವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವಂತೆ ಸಾರ್ವಜನಿಕರಿಂದ ಹೆಚ್ಚಾಗಿ ದೂರುಗಳು ಬಂದಿರುವುದರಿಂದ ಈ ರಸ್ತೆ ದುರಸ್ಥಿ ಮಾಡುವ ವಿಚಾರ.

–12–

**ತೀರ್ಮಾನ ಸಂಖ್ಯೆ:30**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಅಂದಾಜು ಪಟ್ಟಿಯನ್ನು ತಯಾರಿಸಿ ಮೇಲ್ಕಂಡ ಕಾಮಗಾರಿಗೆ ಟೆಂಡರ್ ಕರೆದು ಕ್ರಮಕೈಗೊಳ್ಳಲು ಸಭೆಯಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:31**

ನಗರ ವ್ಯಾಪ್ತಿಯಲ್ಲಿರುವ ಚಿತ್ರ ಮಂದಿರಗಳ ಜಾಹೀರಾತು ಫಲಕ ಹಾಗೂ ಇತರೆ ಜಾಹಿರಾತು ಫಲಕಗಳ ಜಾಹಿರಾತು ಶುಲ್ಕ ವಸೂಲಾತಿ ಮಾಡುವ ವಿಚಾರ.

**ತೀರ್ಮಾನ ಸಂಖ್ಯೆ:31**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ನಗರದ ಮುಖ್ಯವಾದ ಪ್ರದೇಶಗಲ್ಲಿ ಅಂದರೆ ವಾಹನ ನಿಲ್ದಾಣ, ಹೆಚ್ಚಿನ ಜನಸಂದಣಿ ಇರುವ ಪ್ರದೇಶಗಳು ಹಾಗೂ ಇನ್ನಿತರೆ ಭಾಗಗಳಲ್ಲಿ ಪ್ರಚಾರಕ್ಕೆ ಬ್ಯಾನರ್, ಬಂಟಿಕ್ಸ್, ಕಟೌಟ್ ಹಾಗೂ ಗೋಡೆಗಳಿಗೆ ಅಂಟಿಸುವ ಬ್ಯಾನರ್‌ಗಳಿಗೆ ಹೆಚ್ಚಿನ ರೀತಿಯಲ್ಲಿ ಶುಲ್ಕವನ್ನು ವಸೂಲಿಸಲು ತೀರ್ಮಾನಿಸಿ, ಚುನಾವಣಾ ಕಾರ್ಯದ ಪ್ರಚಾರಕ್ಕೆ ನಿಯಮಾನುಸಾರ ಕಡಿಮೆ ದರದಲ್ಲಿ ಶುಲ್ಕವನ್ನು ವಸೂಲಾತಿ ಮಾಡಲು ಸಭೆಯಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:32**

2007–08ನೇ ಸಾಲಿನಲ್ಲಿ 5ನೇ ವೇತನದ ಪರಿಷ್ಕೃತ ವೇತನ ಶ್ರೇಣಿಯು ಜಾರಿಯಾಗಿದ್ದು, ಆರ್ಥಿಕ ಸೌಲಭ್ಯವನ್ನು 1ನೇ ಏಪ್ರಿಲ್–2006 ರಿಂದ ನೀಡಿ ನಗದಗಾಗಿ 1ನೇ ಏಪ್ರಿಲ್–2007ರಿಂದ ಜಾರಿಗೆ ಬರುವಂತೆ ಆದೇಶಿಸಿದ್ದು, ಅದರಂತೆ ಏಪ್ರಿಲ್–2006 ರಿಂದ 2007ನೇ ಮಾರ್ಚ್–31ರ ವರೆಗಿನ ಹೆಚ್ಚುವರಿ ಮೊತ್ತವನ್ನು 2008–09ನೇ ಸಾಲಿನ ಪಾವತಿಸತಕ್ಕದ್ದು ಎಂಬುದಾಗಿ ಆದೇಶಿಸಿರುವುದರಿಂದ 'ಡಿ' ಗ್ರೂಪ್ ನೌಕರರಿಗೆ ನೀಡಿರುವ ರೂ.10,14,475/–ಗಳ ಮೊತ್ತವನ್ನು ಕರ್ನಾಟಕ ಸರ್ಕಾರ ಸುತ್ತೋಲೆ ಸಂಖ್ಯೆ. ನಅಇ.28ಎನ್‌ಎಫ್‌ಸಿ.2006 ದಿನಾಂಕ:17–06–2006ರ ರೀತ್ಯಾ ಮತ್ತು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರುರವರ ಪತ್ರಸಂಖ್ಯೆ.ಪೌನಿ/ಜಂನಿ(ಹ)/ಎಸ್‌ಎಫ್‌ಸಿ.2007–08 ದಿನಾಂಕ:05–01–2008ರ ರೀತ್ಯಾ ಹೆಚ್ಚುವರಿಯಾದಂತಹ ವೇತನ ವ್ಯತ್ಯಾಸ ಮೊತ್ತವನ್ನು ಎಸ್.ಎಫ್.ಸಿ.ಮುಕ್ತ ನಿಧಿಯಿಂದ ಭರಿಸಿಕೊಳ್ಳಬಹುದೆಂದು ಆದೇಶಿಸಿರುವಂತೆ ಪಾವತಿಸಿರುವ ಮೊತ್ತಕ್ಕೆ ಅನುಮೋದನೆ ನೀಡುವ ವಿಚಾರ.

**ತೀರ್ಮಾನ ಸಂಖ್ಯೆ:32**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಕರ್ನಾಟಕ ಸರ್ಕಾರ ಸುತ್ತೋಲೆ ಸಂಖ್ಯೆ. ನಅಇ.28ಎನ್‌ಎಫ್‌ಸಿ.2006ದಿನಾಂಕ:17–06–2006ರರೀತ್ಯಾ ಮತ್ತು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರುರವರ ಪತ್ರಸಂಖ್ಯೆ.ಪೌನಿ/ಜಂನಿ(ಹ)/ಎಸ್‌ಎಫ್‌ಸಿ.2007–08 ದಿನಾಂಕ:05–01–2008ರ ರೀತ್ಯಾ ಹೆಚ್ಚುವರಿಯಾದಂತಹ ವೇತನ ವ್ಯತ್ಯಾಸಮೊತ್ತವನ್ನು ಎಸ್.ಎಫ್.ಸಿ.ಮುಕ್ತ ನಿಧಿಯಿಂದ ಭರಿಸಿಕೊಳ್ಳ ಬಹುದೆಂದು ಆದೇಶಿಸಿರುವಂತೆ ಪಾವತಿಸಿರುವ ಮೊತ್ತಕ್ಕೆ ಸಭೆಯಲ್ಲಿ ಬಹುಮತದಿಂದ ಒಪ್ಪಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ:33**

ಕಛೇರಿಯಲ್ಲಿ ಜನನ–ಮತ್ತು ಮರಣದ ನೋಂದಣಿ–ವಿತರಣೆ ಕಾರ್ಯವು ಇಂಟರ್‌ನೆಟ್ ಮೂಲಕ ನಿರ್ವಹಿಸುತ್ತಿದ್ದು, ಈ ಕಾರ್ಯಕ್ಕೆ ಒಬ್ಬ ಡಾಟಾಎಂಟ್ರಿ ಆಪರೇಟರನ್ನು ಸರ್ಕಾರದ ಆದೇಶದಂತೆ ಕಿಯೋನಿಕ್ಸ್ ಸಂಸ್ಥೆಯಿಂದ ಸಭೆಯ ನಿರೀಕ್ಷಣೆ ಮಂಜೂರಾತಿ ಮೇರೆಗೆ ನಿಯೋಜಿಸಿಕೊಂಡಿರುವುದನ್ನು ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:33**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಕಛೇರಿಯಲ್ಲಿ ಜನನ–ಮತ್ತು ಮರಣದ ನೋಂದಣಿ–ವಿತರಣೆ ಕಾರ್ಯವು ಇಂಟರ್‌ನೆಟ್ ಮೂಲಕ ನಿರ್ವಹಿಸುತ್ತಿದ್ದು, ಈ ಕಾರ್ಯಕ್ಕೆ ಒಬ್ಬ ಡಾಟಾಎಂಟ್ರಿ ಆಪರೇಟರನ್ನು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಲೋಇ.472 ಅಕೋ–3/2007 ದಿನಾಂಕ:22–09–2007ರ ಆದೇಶದಂತೆ ಕಿಯೋನಿಕ್ಸ್ ಸಂಸ್ಥೆಯಿಂದ ಸಭೆಯ ನಿರೀಕ್ಷಣೆ ಮಂಜೂರಾತಿ ಮೇರೆಗೆ ನಿಯೋಜಿಸಿಕೊಂಡಿರುವುದನ್ನು ಸಭೆಯಲ್ಲಿ ಬಹುಮತದಿಂದ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ:34**

2007-08ನೇ ಸಾಲಿಗೆ ಸಾರ್ವಜನಿಕ ಕುಂದು ಕೊರತೆ ನಿವಾರಣಾ ವಿಭಾಗದಲ್ಲಿ ಶ್ರೀ ಗಜಾನನ ವಿದ್ಯಾಸಂಸ್ಥೆ, ಬೆಂಗಳೂರು ರವರು ಕೆಲಸ ನಿರ್ವಹಿಸಲು ಒಂದು ವರ್ಷದ ಅವಧಿಗೆ ಪಡೆದಿದ್ದು, ದಿನಾಂಕ:31-08-2008ಕ್ಕೆ ಈ ಅವಧಿಯು ಮುಕ್ತಾಯವಾಗಿರುವುದರಿಂದ, ಸದರಿ ಕೆಲಸವನ್ನು ನಿರ್ವಹಿಸಲು ಸಭೆಯ ಮಂಜೂರಾತಿ ನಿರೀಕ್ಷಣೆ ಮೇರೆಗೆ ಟೆಂಡರ್ ಕರೆದಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರ ಪೈಕಿ ಮತ್ತೆ ಶ್ರೀ ಗಜಾನನ ವಿದ್ಯಾಸಂಸ್ಥೆ, ಬೆಂಗಳೂರು ರವರು ಅತೀ ಕಡಿಮೆ ದರವನ್ನು ನಮೂದಿಸಿರುವುದರಿಂದ ಸದರಿಯವರಿಗೆ 01-09-2008 ರಿಂದ 31-08-2009ರ ವರೆಗೆ ಸಾರ್ವಜನಿಕ ಕುಂದು ಕೊರತೆ ನಿವಾರಣಾ ವಿಭಾಗದ ಕೆಲಸ ನಿರ್ವಹಿಸಲು ಕಾರ್ಯದೇಶವನ್ನು ವಿತರಿಸಿರುವುದನ್ನು ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:34**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ 2007-08ನೇ ಸಾಲಿಗೆ ಸಾರ್ವಜನಿಕ ಕುಂದು ಕೊರತೆ ನಿವಾರಣಾ ವಿಭಾಗದಲ್ಲಿ ಶ್ರೀ ಗಜಾನನ ವಿದ್ಯಾಸಂಸ್ಥೆ, ಬೆಂಗಳೂರು ರವರು ಕೆಲಸ ನಿರ್ವಹಿಸುತ್ತಿದ್ದು, ದಿನಾಂಕ:31-08-2008ಕ್ಕೆ ಈ ಅವಧಿಯು ಮುಕ್ತಾಯವಾಗಿರುತ್ತದೆ. ಆದ್ದರಿಂದ ಸದರಿ ಕೆಲಸವನ್ನು ನಿರ್ವಹಿಸಲು ಸಭೆಯ ಮಂಜೂರಾತಿ ನಿರೀಕ್ಷಣೆ ಮೇರೆಗೆ ಟೆಂಡರ್ ಕರೆದಿದ್ದು, ಸದರಿ ಟೆಂಡರ್‌ನಲ್ಲಿ 2ಜನ ಗುತ್ತಿಗೆದಾರರು ಭಾಗವಹಿಸಿದ್ದು, ಈ ಗುತ್ತಿಗೆದಾರರ ಪೈಕಿ ಮತ್ತೆ ಶ್ರೀ ಗಜಾನನ ವಿದ್ಯಾಸಂಸ್ಥೆ, ಬೆಂಗಳೂರು ರವರು ಅತೀ ಕಡಿಮೆ ದರವನ್ನು ನಮೂದಿಸಿರುವುದರಿಂದ ಕಛೇರಿಯು ಕಡಿಮೆ ದರ ನಮೂದಿಸಿರುವ ಟೆಂಡರ್‌ನ್ನು ಅಂಗೀಕರಿಸಿ, ದಿನಾಂಕ:01-09-2008 ರಿಂದ 31-08-2009ರ ವರೆಗೆ ಸಾರ್ವಜನಿಕ ಕುಂದು ಕೊರತೆ ನಿವಾರಣಾ ವಿಭಾಗದ ಕೆಲಸ ನಿರ್ವಹಿಸಲು ಕಾರ್ಯದೇಶವನ್ನು ವಿತರಿಸಿರುವುದನ್ನು ಸಭೆಯಲ್ಲಿ ಬಹುಮತದಿಂದ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ:35**

ನಗರ ಸಾಕ್ಷರತಾ ಸಮಿತಿಗೆ ಪೌರಾಯುಕ್ತರು ಕಾರ್ಯದರ್ಶಿಗಳಾಗಿದ್ದು, ಇದರ ಉಸ್ತುವಾರಿ ನಿರ್ವಹಣೆಗೆ ಸರ್ಕಾರದಿಂದ ಪ್ರತ್ಯೇಕವಾಗಿ ಅನುದಾನ ಬಿಡುಗಡೆಯಾಗುತ್ತಿದ್ದು, ಸದರಿ ಸಮಿತಿಯಡಿಯಲ್ಲಿ 10 ಮುಂದುವರೆಕೆ ಶಿಕ್ಷಣ ಕೇಂದ್ರ, 1 ನೋಡಲ್ ಶಿಕ್ಷಣ ಕೇಂದ್ರ ಇದ್ದು, ಇವುಗಳ ನಿರ್ವಹಣೆ ಮತ್ತು ಸಭೆ, ವಾಚನಾಲಯ, ಗ್ರಂಥಾಲಯ, ಆಭಿವೃದ್ಧಿ ಕೇಂದ್ರ, ಮಾಹಿತಿ ಕೇಂದ್ರ, ಸಮುದಾಯ ಸೇವಾ ಕೇಂದ್ರ, ಕ್ರೀಡಾ ಕೇಂದ್ರ, ಸಾಂಸ್ಕೃತಿಕ ಕೇಂದ್ರ, ಮಾಹಿತಿ ಕೇಂದ್ರ, ಚರ್ಚಾ ಕೇಂದ್ರ ಹಾಗೂ ಇತರೆ ಚಟುವಟಿಕೆಗಳಿಗೆ ಒಂದು ಕಛೇರಿ ಅಗತ್ಯವಿದ್ದು, ಈ ಬಗ್ಗೆ ಸರ್ಕಾರದಿಂದ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾಗಲಿರುವುದರಿಂದ ನಗರಸಭಾ ವ್ಯಾಪ್ತಿಯಲ್ಲಿ ಸದರಿ ಸಮಿತಿಗೆ 100 X 100 ಅಡಿಗಳ ಜಾಗವನ್ನು ಉಚಿತವಾಗಿ ನೀಡುವಂತೆ ಸಮಿತಿಯವರು ಕೋರಿರುವ ವಿಚಾರ.

**ತೀರ್ಮಾನ ಸಂಖ್ಯೆ:35**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಜಾಗವನ್ನು ಗುರ್ತಿಸಿದಲ್ಲಿ ಸದರಿ ವಿಷಯವನ್ನು ಮುಂದಿನ ಸಾಮಾನ್ಯ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:36**

ನಗರಸಭಾ ವತಿಯಿಂದ ನೀಡುವ ವಾಸದ ದೃಢೀಕರಣ ಪತ್ರ ವಿತರಣೆಗೆ ಶುಲ್ಕ ನಿಗಧಿಪಡಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:36</u>**

ಸದರಿ ವಿಷಯವನ್ನು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಗಿ, ವಾಸಸ್ಥಳ ದೃಡೀಕರಣ ಪತ್ರ ಪಡೆಯಲು ಅರ್ಜಿ ಸಲ್ಲಿಸುವ ಸಾರ್ವಜನಿಕರು ಈ ಪತ್ರಕ್ಕೆ ಅವಶ್ಯಕವಾದ ಸೂಕ್ತ ದಾಖಲಾತಿಗಳನ್ನು ಒದಗಿಸಿದಲ್ಲಿ ಹಾಗೂ ಆಯಾಯ ವಾರ್ಡಿನ ಸದಸ್ಯರ ವತಿಯಿಂದ ದೃಢೀಕರಿಸಿ ಸಹಿಪಡೆದು ಮನವಿ ಪತ್ರವನ್ನು ನೀಡಿದಲ್ಲಿ ಯಾವುದೇ ಶುಲ್ಕವನ್ನು ಪಾವತಿಸಿಕೊಳ್ಳದೇ, ಕಛೇರಿಗೆ ಬರುವ ಸಾರ್ವಜನಿಕರ ಅನುಕೂಲದ ದೃಷ್ಟಿಯಿಂದ ಆಯಾ ದಿನವೇ ಕ್ರಮಕೈಗೊಂಡು ವಾಸಸ್ಥಳ ದೃಢೀಕರಣ ಪತ್ರವನ್ನು ವಿತರಿಸಲು ಸಭೆಯಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು. ಹಾಗೂ ಈ ಬಗ್ಗೆ ಅರ್ಜಿ ಸಲ್ಲಿಸಿರುವ ಮನವಿದಾರರು ಸೂಕ್ತವಾದ ದಾಖಲಾತಿಗಳನ್ನು ಒದಗಿಸದೇ ಇದ್ದ ಪಕ್ಷದಲ್ಲಿ ವಾಸಸ್ಥಳ ದೃಢೀಕರಣ ಪತ್ರವನ್ನು ವಿತರಿಸಲು ರಹ ಇರುವುದಿಲ್ಲವೆಂಬುದಾಗಿ ಹಿಂಬರಹ ನೀಡಲು ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:37</u>**

ಸ್ಥಾಯಿ ಸಮಿತಿ ಸಭೆಯನ್ನು ರಚಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:37</u>**

ಸದರಿ ವಿಷಯವನ್ನು ಮುಂಬರುವ ಸಾಮಾನ್ಯ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.

**<u>ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳು:-</u>**

**<u>ವಿಷಯ ಸಂಖ್ಯೆ:38/1</u>**

ವಿಶ್ವಬ್ಯಾಂಕ್ ನೆರವಿನೊಂದಿಗೆ ಕೆ.ಎಂ.ಆರ್.ಪಿ. ಯೋಜನೆಯಡಿ ನಗರಕ್ಕೆ ಅಂಗೀಕಾರವಾಗಿರುವ ಒಳಚರಂಡಿ ವ್ಯವಸ್ಥೆ ಕಾಮಗಾರಿಯನ್ನು ಪಟ್ಟಣದ ಹೆಚ್ಚು ನಿವಾಸಿಗಳಿಗೆ ಅನುಕೂಲವಾಗುವಂತೆ ಉತ್ತಮ ಗುಣಮಟ್ಟದೊಂದಿಗೆ ನಿಗಧಿತ ಕಾಲಾವಧಿಯೊಳಗೆ ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾದ ಸೂಕ್ತ ಮಾರ್ಪಾಟಿನೊಂದಿಗೆ ವರ್ಗೀಕರಣ ಮಾಡಿ (ವರ್ಗ/ಗುಂಪುಗಳು) ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾಮಗಾರಿ ಪೂರ್ಣಗೊಳಿಸಲು ಅಧ್ಯಕ್ಷರಿಗೆ ಮತ್ತು ಪೌರಾಯುಕ್ತರಿಗೆ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಂಸ್ಥೆಗೆ ದೊಡ್ಡಬಳ್ಳಾಪುರ ನಗರಸಭೆ ಕೌನ್ಸಿಲ್‌ನ ಪೂರ್ಣ ಅಧಿಕಾರ ನೀಡುವ ವಿಚಾರ.

**<u>ತೀರ್ಮಾನ ಸಂಖ್ಯೆ:38/1</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ವಿಶ್ವಬ್ಯಾಂಕ್ ನೆರವಿನೊಂದಿಗೆ ಕೆ.ಎಂ.ಆರ್.ಪಿ. ಯೋಜನೆಯಡಿ ನಗರಕ್ಕೆ ಅಂಗೀಕಾರವಾಗಿರುವ ಒಳಚರಂಡಿ ವ್ಯವಸ್ಥೆ ಕಾಮಗಾರಿಯನ್ನು ಪಟ್ಟಣದ ಹೆಚ್ಚು ನಿವಾಸಿಗಳಿಗೆ ಅನುಕೂಲವಾಗುವಂತೆ ಉತ್ತಮ ಗುಣಮಟ್ಟದೊಂದಿಗೆ ನಿಗಧಿತ ಕಾಲಾವಧಿಯೊಳಗೆ ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾದ ಸೂಕ್ತ ಮಾರ್ಪಾಡಿನೊಂದಿಗೆ ವರ್ಗೀಕರಣ (ಪ್ಯಾಕೇಜ್) ಮಾಡಿ ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾಮಗಾರಿ ಪೂರ್ಣಗೊಳಿಸಲು ಅಧ್ಯಕ್ಷರಿಗೆ ಮತ್ತು ಪೌರಾಯುಕ್ತರಿಗೆ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಂಸ್ಥೆಗೆ ನಗರಸಭೆ ಕೌನ್ಸಿಲ್‌ನ ಪೂರ್ಣ ಅಧಿಕಾರಿ ನೀಡಲಾಗಿದೆ ಎಂಬುದಾಗಿ ಬಹುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:38/2</u>**

ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ.ಪೌನಿ/ತಾಂತ್ರಿಕ/ದೊಡ್ಡಬಳ್ಳಾಪುರ/46/08-09 ದಿನಾಂಕ:30-10-2008ರ ಪತ್ರದ ರೀತ್ಯಾ ಲೋಕೋಪಯೋಗಿ ಇಲಾಖೆಯ ರಸ್ತೆಗಳಾದ (1) ಗುರುಭವನದಿಂದ ಜನತಾ ಬಜಾರ್‌ವರೆಗಿನ ಡಾ:ಅಂಬೇಡ್ಕರ್ ರಸ್ತೆ ಮತ್ತು (2) ಶ್ರೀ ಕೊಂಗಾಡಿಯಪ್ಪ ಮುಖ್ಯ ರಸ್ತೆಯಿಂದ ಮುಗುವಾಳಪ್ಪ ವೃತ್ತದವರೆಗಿನ ಮುಕ್ತಾಂಭಿಕ ರಸ್ತೆಗಳಿಗೆ ಡಾಂಬರೀಕರಣ ಮಾಡುವ ವಿಚಾರ.

**ತೀರ್ಮಾನ ಸಂಖ್ಯೆ:38/2**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಿ, 2008–09ನೇ ಸಾಲಿನಲ್ಲಿ ವಿಶೇಷ ಎಸ್.ಎಫ್.ಸಿ. ಅನುದಾನ ಸರ್ಕಾರದಿಂದ ಬಿಡುಗಡೆಯಾಗಿದ್ದು, ಈ ನಾಲ್ಕು ರಸ್ತೆಗಳು ನಗರಸಭೆಯ ವ್ಯಾಪ್ತಿಯಲ್ಲಿದ್ದು, ಸಾರ್ವಜನಿಕರು ನಗರಸಭೆಗೆ ದೂರುಗಳನ್ನು ನೀಡುತ್ತಿರುವುದರಿಂದ ಹಾಗೂ ಸಾರ್ವಜನಿಕರ ಹಿತದೃಷ್ಟಿ ಯನ್ನು ಗಮನದಲ್ಲಿಟ್ಟುಕೊಂಡು ರಸ್ತೆಗಳು ತುಂಬಾ ಹದಗೆಟ್ಟಿರುವುದರಿಂದ ಲೋಕೋಪಯೋಗಿ ಇಲಾಖೆಯ ಈ ಮೇಲ್ಕಂಡ ಎರಡು ರಸ್ತೆಗಳಿಗೆ ತಾತ್ಕಾಲಿಕವಾಗಿ ಡಾಂಬರೀಕರಣ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:38/3**

ಐ.ಡಿ.ಎಸ್.ಎಂ.ಟಿ. ಅಂಗಡಿ ಮಳಿಗೆಗಳ ಬಾಕಿ ಇರುವ ಕೆಲಸಗಳ ವಿಚಾರ.

**ತೀರ್ಮಾನ ಸಂಖ್ಯೆ:38/3**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಸುಮಾರು ವರ್ಷಗಳಿಂದಲೂ ಐ.ಡಿ.ಎಸ್.ಎಂ.ಟಿ. ಮಳಿಗೆಗಳ ಕಾರ್ಯ ಪೂರ್ಣಗೊಳ್ಳದೆ ಬಾಕಿ ಇದ್ದು, ಮಳಿಗೆಗಳಲ್ಲಿ ಸಾರ್ವಜನಿಕರು ತಮಗೆ ಇಷ್ಟಬಂದಂತೆ ಅವರ ಸಾಮಗ್ರಿಗಳನ್ನು ದಾಸ್ತಾನು ಮಾಡಿಕೊಂಡಿದ್ದು, ನಗರಸಭೆಗೆ ಆದಾಯವಿಲ್ಲದೆ ಇರುವುದರಿಂದ ಈ ಕೂಡಲೇ ಕ್ರಮವಹಿಸಿ ಮಳಿಗೆಗಳಿಗೆ ಬಾಕಿ ಇರುವ ಕಾಮಗಾರಿಗಳನ್ನು ಪಟ್ಟಿ ಮಾಡಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ವರದಿ ಸಲ್ಲಿಸಿ, ಕಾಮಗಾರಿಗಳನ್ನು ಪೂರ್ಣಗೊಳಿಸಿ ಬಾಡಿಗೆಗೆ ನೀಡಲು ಮಂಜೂರಾತಿ ಆದೇಶವನ್ನು ಪಡೆದು, ನಗರಸಭಾ ಸಂಪನ್ಮೂಲ ಆದಾಯವನ್ನು ಕ್ರೂಢೀಕರಿಸಲು ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:38/4**

ಸೊಳ್ಳೆ ನಿಯಂತ್ರಣಕ್ಕಾಗಿ ಫಾಗಿಂಗ್ ಯಂತ್ರವನ್ನು ನಿರ್ವಹಣೆ ಮಾಡಲು 4 ಸೈಕಲ್‌ಗಳನ್ನು ಖರೀದಿಸುವ ವಿಚಾರ.

**ತೀರ್ಮಾನ ಸಂಖ್ಯೆ:38/4**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರ ವ್ಯಾಪ್ತಿಯಲ್ಲಿ ಸೊಳ್ಳೆ ನಿಯಂತ್ರಣಕ್ಕಾಗಿ ಒಂದು ವಾರಕ್ಕೆ ಒಂದು ಭಾರಿ ವಾರ್ಡ್‌ಗಳಲ್ಲಿ ಹೊಗೆ ಬಿಡುವ ಕೆಲಸವನ್ನು ನಿರ್ವಹಿಸಿದರೆ ಸೊಳ್ಳೆಗಳು ನಿಯಂತ್ರಣಕ್ಕೆ ಬಾರದೆ ಇರುವುದರಿಂದ ಒಂದು ವಾರಕ್ಕೆ ಎರಡು ಅಥವಾ ಮೂರು ಬಾರಿಯಾದರು ಹೊಗೆಯಂತ್ರದಿಂದ ಹೊಗೆಯನ್ನು ಸಿಂಪಡಿಸಿದರೆ ಸೊಳ್ಳೆಗಳನ್ನು ನಿಯಂತ್ರಿಸಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಿಬ್ಬಂದಿ ವರ್ಗದವರಿಗೆ 4 ಸೈಕಲ್‌ಗಳನ್ನು ಖರೀದಿಸಿ, ಕಾರ್ಯ ಪ್ರವೃತ್ತರಾಗಲು ಸಭೆಯಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:38/5**

ದೊಡ್ಡಬಳ್ಳಾಪುರ ನಗರದ ಪಿತಾಮಹಾನೆಂದು ಪ್ರಖ್ಯಾತಿಯಾಗಿರುವ ದಿವಂಗತ ಶ್ರೀ ಡಿ.ಕೊಂಗಾಡಿಯಪ್ಪನವರ ಸ್ಮಾರಕವನ್ನು ಅಭಿವೃದ್ಧಿ ಪಡಿಸುವ ವಿಚಾರ.

**ತೀರ್ಮಾನ ಸಂಖ್ಯೆ:38/5**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ದೊಡ್ಡಬಳ್ಳಾಪುರ ನಗರದ ಅತೀ ಮುಖ್ಯವಾದ ಗಣ್ಯವ್ಯಕ್ತಿಗಳಲ್ಲಿ ಒಬ್ಬರಾದ ಹಾಗೂ ಈ ನಗರದ ಜನಸಾಮಾನ್ಯರ ಏಳಿಗೆಗೆ ಬಗ್ಗೆ ಸರ್ವೋತಮುಖ ಅಭಿವೃದ್ಧಿಯನ್ನು ಸಾಧಿಸಲು ಶ್ರಮಿಸಿದ ಧೀಮಂತ ವ್ಯಕ್ತಿಯಾಗಿರುವ ದಿವಂಗತ ಡಿ. ಕೊಂಗಾಡಿಯಪ್ಪವರ ಸ್ಮಾರಕವನ್ನು ಅಭಿವೃದಿ ಪಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:38/6**

ಕರ್ನಾಟಕ ಸರ್ಕಾರ ನಡವಳಿ ಆದೇಶ ಸಂಖ್ಯೆ.ನಅಇ/69/ಎಸ್.ಎಫ್.ಸಿ/2007/ಬೆಂಗಳೂರು ದಿನಾಂಕ:10–10–2008ರ ರೀತ್ಯಾ 12ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ರಸ್ತೆ ಮತ್ತು ಸೇತುವೆಗಳ ನಿರ್ವಹಣೆಗಾಗಿ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ದೊಡ್ಡಬಳ್ಳಾಪುರ ನಗರಸಭೆಗೆ 8.00ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಮೊದಲ ಕಂತಿನಲ್ಲಿ 4.00ಲಕ್ಷಗಳ ಮೊತ್ತವನ್ನು ಬಿಡುಗಡೆ ಮಾಡಿರುತ್ತಾರೆ. ಆದ್ದರಿಂದ ನಗರಸಭೆಗೆ ಬಿಡುಗಡೆಯಾಗಿರುವ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸುವ ವಿಚಾರ.

**ತೀರ್ಮಾನ ಸಂಖ್ಯೆ:38/6**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ಕೆಳಕಂಡ ಕಾಮಗಾರಿಗಳನ್ನೊಳಗೊಂಡ ಕ್ರಿಯಾ ಯೋಜನೆಗೆ ಜಿಲ್ಲಾಧಿಕಾರಿಗಳವರಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಅನುಷ್ಠಾನ ಗೊಳಿಸಲು ಬಹುಮತದಿಂದ ತೀರ್ಮಾನಿಸಲಾಯಿತು.

| ಕ್ರ.ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | ವಾರ್ಡ್ ನಂ.2ರ ಗಂಗಾಧರಪುರ ಮುನಿತಾಯಮ್ಮನವರ ಮನೆ ಮುಂದೆ ಡೆಕ್ ಸ್ಲ್ಯಾಬ್ ಕಲ್ವರ್ಟ್ ಕೆಲಸ | 0.50 |
| 2 | ವಾರ್ಡ್ ನಂ.3ರ ಆಯುರ್ವೇಧಿಕ್ ಆಸ್ಪತ್ರೆ ಪಕ್ಕ ರಸ್ತೆ ದುರಸ್ಥಿ | 0.40 |
| 3 | ವಾರ್ಡ್ ನಂ.12ರ ದೇವರಾಜನಗರ, 1ನೇ ಕ್ರಾಸ್ ಹತ್ತಿರ ಡೆಕ್ ಸ್ಲ್ಯಾಬ್ ಕಲ್ವರ್ಟ್ ಕೆಲಸ | 0.30 |
| 4 | ವಾರ್ಡ್ ನಂ.17ರ ಲಿಟ್ಲ್ ಏಂಜೆಲ್ಸ್ ಸ್ಕೂಲ್ ಮುಂಭಾಗ ಡೆಕ್ ಸ್ಲ್ಯಾಬ್ ಕಲ್ವರ್ಟ್ ಕೆಲಸ | 0.30 |
| 5 | ವಾರ್ಡ್ ನಂ.18ರ ಆಂಜಿನಪ್ಪ ಸಿಲ್ಕ್ ಹೌಸ್ ಪಕ್ಕದ ರಸ್ತೆಯಲ್ಲಿ ಡೆಕ್ ಸ್ಲ್ಯಾಬ್ ಕಲ್ವರ್ಟ್ ಕೆಲಸ | 0.30 |
| 6 | ವಾರ್ಡ್ ನಂ.19ರ ಡಿ.ಎಲ್.ರಂಗನಾಥ್ ರವರ ಮನೆ ಮುಂಭಾಗ ಡೆಕ್‌ಸ್ಲ್ಯಾಬ್ ಕಲ್ವಟ್ ಮಾಡುವ ಕೆಲಸ | 0.30 |
| 7 | ವಾರ್ಡ್ ನಂ.20ರ ಟೆಲಿಫೋನ್ ಎಕ್ಸ್‌ಚೇಂಜ್ ಹಿಂಭಾಗದ ರಸ್ತೆಯಲ್ಲಿನ ಕಲ್ವರ್ಟ್ ದುರಸ್ಥಿ ಕಾಮಗಾರಿ | 0.50 |
| 8 | ವಾರ್ಡ್ ನಂ.21ರ ದರ್ಗಾಮೊಹಲ್ಲಾ ರಸ್ತೆಯಲಿ ಡೆಕ್ ಸ್ಲ್ಯಾಬ್ ಕಲ್ವರ್ಟ್ ಕಾಮಗಾರಿ | 0.50 |
| 9 | ವಾರ್ಡ್ ನಂ.22ರ ಮಾರ್ಕೆಟ್ ರಸ್ತೆಯಲ್ಲಿ ಡೆಕ್ ಸ್ಲ್ಯಾಬ್ ಕಲ್ವರ್ಟ್ ಕಾಮಗಾರಿ | 0.30 |
| 10 | ವಾರ್ಡ್ ನಂ.23ರ ಚಿಕ್ಕಪೇಟೆ ಉರ್ದುಶಾಲೆ ಹತ್ತಿರ ಡೆಕ್ ಸ್ಲ್ಯಾಬ್ ಕಲ್ವರ್ಟ್ ಕಾಮಗಾರಿ | 0.30 |
| 11 | ವಾರ್ಡ್ ನಂ.24ರ ಮುಕ್ತಾಂಭಿಕ ರಸ್ತೆಯಲ್ಲಿ ಡೆಕ್ ಸ್ಲ್ಯಾಬ್ ಕಲ್ವರ್ಟ್ ಕಾಮಗಾರಿ | 0.30 |
| 12 | ವಾರ್ಡ್ ನಂ.25ರ ಡಿ. ಕ್ರಾಸ್ ರಸ್ತೆಯಲ್ಲಿ ಗುಂಡಪ್ಪನವರ ಮನೆ ಪಕ್ಕ ಡೆಕ್‌ಸ್ಲ್ಯಾಬ್ ಕಲ್ವರ್ಟ್ ಕಾಮಗಾರಿ | 0.70 |
| 13 | ವಾರ್ಡ್ ನಂ.27ರ ರೋಜಿಪುರ ಮುಖ್ಯ ರಸ್ತೆಯಲ್ಲಿ ಡೆಕ್‌ಸ್ಲ್ಯಾಬ್ ಕಲ್ವರ್ಟ್ ಕಾಮಗಾರಿ | 0.30 |
| 14 | ವಾರ್ಡ್ ನಂ.28ರ ಸೋಮೇಶ್ವರ ಬಡಾವಣೆಯ ಅಡ್ಡರಸ್ತೆಯಲ್ಲಿ ಡೆಕ್‌ಸ್ಲ್ಯಾಬ್ ಕಲ್ವರ್ಟ್ ಕಾಮಗಾರಿ | 0.30 |

| ಕ್ರ.ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 15 | ವಾರ್ಡ್ ನಂ.28ರ ಸೋಮೇಶ್ವರ ಬಡಾವಣೆಯ ಮುಖ್ಯ ರಸ್ತೆಯಲ್ಲಿ (ಹಳೇ ಮಧುಗಿರಿ ರಸ್ತೆ ಹತ್ತಿರ) ಡೆಕ್‌ಸ್ಲ್ಯಾಬ್ ಕಲ್ವರ್ಟ್ ಕಾಮಗಾರಿ | 0.85 |
| 16 | ವಾರ್ಡ್ ನಂ.29ರ ಗಾಣಿಗರಪೇಟೆ ರಸ್ತೆಯಲ್ಲಿ (ತಾಲ್ಲೂಕು ಕಛೇರಿ ಸರ್ಕಲ್ ಹತ್ತಿರ) ಡೆಕ್‌ಸ್ಲ್ಯಾಬ್ ಕಲ್ವರ್ಟ್ ಕಾಮಗಾರಿ | 0.80 |
| 17 | ವಾರ್ಡ್ ನಂ.30ರ ಇಸ್ಲಾಂಪುರ ಉರ್ದು ಶಾಲಯ ಪಕ್ಕ ಕಲ್ವರ್ಟ್ ದುರಸ್ಥಿ ಕಾಮಗಾರಿ | 0.25 |
| 18 | ವಾರ್ಡ್ ನಂ.30ರ ಇಸ್ಲಾಂಪುರ ಬಿಜುಫಯಾಜ್ ಮನೆ ಮುಂಭಾಗ ಕಲ್ವರ್ಟ್ ದುರಸ್ಥಿ ಕಾಮಗಾರಿ | 0.30 |
| 19 | ವಾರ್ಡ್ ನಂ.31ರ ಶಾಂತಿನಗರ 5ನೇ ಕ್ರಾಸ್‌ನಲ್ಲಿ ಡೆಕ್‌ಸ್ಲ್ಯಾಬ್ ಕಲ್ವರ್ಟ್ ಕಾಮಗಾರಿ | 0.25 |
| 20 | ವಾರ್ಡ್ ನಂ.31ರ ಶಾಂತಿನಗರ 3ನೇ ಕ್ರಾಸ್‌ನಲ್ಲಿ ಡೆಕ್‌ಸ್ಲ್ಯಾಬ್ ಕಲ್ವರ್ಟ್ ಕಾಮಗಾರಿ | 0.25 |

**ಸಹಿ:–**
**(ಜಿ.ರಾಮಕೃಷ್ಣ)**
**ಅಧ್ಯಕ್ಷರು,**
**ನಗರಸಭೆ, ದೊಡ್ಡಬಳ್ಳಾಪುರ.**

## " ನಕಲು ಪ್ರತಿ "

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**